P 8 E

~~Dept~~ Secretariat

App. F. IX-4

1929. (V.P.) File No. 74-29

Previous References

Serial Nos. 1–2

Later References

General and Revenue Secretariat.

Serial Nos.

Part B for April 30

SUBJECT

Subscription to the ~~village panchayats~~ Kannada edition of Agricultural & experimental union journal by village panchayats

---

2 To, The Revenue Commissioner
Lr. No. 72128 8.6.30

Requests to encourage the village panchayats to subscribe for the journal

HS
11/4

GEN. & REVENUE DEPT.
3944.
4 FEB 1930
L. S. G. BRANCH

Extract from the Proceedings of the Monthly Meeting of the Director of Agriculture with the D e w a n on - 29th January 1930.

VP 7 ¾ 29-1

" Schools and Village Panchayets to be encouraged to take in the Kannada Edition of the Agricultural and Experimental Union Journal."

1 This may be sent to the L.S.G. Branch for further action.

Hdo 3/2/30.

GEN. & REVENUE DEPARTMENT
DEVELOPMENT BRANCH
7056

L.S.G. Br) 3/2/30

Note for necessary action in the first instance.

Hdo. 14-5) 4/2/30

4 Mean while a draft to the Director for consideration

Mr L&S) 4/2

Draft submitted

10/2/30 6

Ch Secy) 10/2

CHIEF SECRETARY.
11 FEB. 1930

7 Please ask the Director a few Branch to obtain copies of 2 or 3 issues of this Journal. What is the annual subscription?

8 Dev Branch with compliments) 17/2/30

3944 7056 7893

App. F. III—2]

General and Revenue Secretariat

V. (File No. 74 of 1929.

Serial No.

From a copy of the Statement of Newspapers in the State for 1928 it will be seen that the Subscriptn for the journal is Rs 3/- per annum Dft calling for copies of two or three issues is subd

Hdtb 17/2/30.

10

Issue Ce 19/2

To The Dir. of Agri.

No. D. 9522 dd 21/2/30

Requests him to forward two or three recent issues of the A&B mirn journal in Kannada.

From The Dir. of Agri

No. Rot 2294/29-30 dd 10/3/30

forwards a copy each of the journal for three months.

11 Subd with refce to para 3 above.

Hdtb Ref - Subscription Rs 3/- (annual).-

18/3/30.

C.R. Lis.

Ce.

Ce 20/3/30

22/3/30

Ce 22/3

CHIEF SEC 22 MAR 1930

OFFICE OF THE MEMBER OF COUNCIL 24 MAR 1930 7194

The draft letter to R.C may be approved

Seems Meerly

MM. 23/3

Ce 24/3

CSS 27/3

Ce 29/3

1/4

Note—Contn. Sheet

WD 066—GPB—30,000—26-7-29

3944

App. F. III—2]

General and Revenue Secretariat.

VP File No. 74 of 1929.

Serial No.	
2	20, The Revenue Commissioner's Report No. L 7212 d 8-4-30 Requested to ask the Village Panchayats in the State to subscribe for the agricultural journal

GEN B 3 CI
9 APR 1930
L. S. A.

NOTE—Contn. sheet.

WD 066—GPB—30,000—26-7-29

Appendix F G—1

SUBJECT.....

Section A 46

File No.

Serial No.

No. 95-22

Diary No. of letter replied to.....7057.....

General and Revenue Secretariat

( )

the *192*

To The Dir of Agri

Sir,

I am directed to request you to be so good as to forward at a very early date 2 copies of two or three recent issues of the Mysore Agri. & Expt. Union Journal in Kannada to this office.

I have etc

for Secy

Date of issue 21/2/30

Signed by Sir C.S. Navunda

List of enclosures.....

Copied by.....

Examined by.....

19.2.30

17/2/30

over

WD 063—GPB.—20,000—1-8-29

Telegraphic Address "Agri., Bangalore."
Code—5th Edition A. B. C.

DEPARTMENT OF AGRICULTURE,
MYSORE STATE

15 MAR 1930

DEVELOPMENT BRANCH

BANGALORE,
March 10, 1930.

In reply please quote in full the Nos. and indicative symbol given below.

Roc. 2294/29-30.

FROM

LESLIE C. COLEMAN, ESQ., M.A., PH.D.,
DIRECTOR OF AGRICULTURE IN MYSORE,
BANGALORE.

To

N. Rama Rao, Esq., B.A.,B.L.,
Secretary to the Government of Mysore,
Development Departments, Bangalore.

SIR,

As desired in your letter No.D.9522/A&E. dated 21-2-30 I have the honour to forward herewith three copies of the recent issues of the Mysore Agricultural and Experimental Union Journal in Kannada.

I have the honour to be,
Sir,
Your most obedient servant,

Director of Agriculture.

dsr



ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ

ಸಂಪುಟ ೫] ಶುಕ್ಲ–ಶ್ರಾವಣ ೧೯೨೯ [ಸಂಚಿಕೆ ೧೦

ಕೆಲವು ವಿಷಯಗಳು

ಕಬ್ಬಿನ ವ್ಯವಸಾಯ

ವ್ಯವಸಾಯದ ಹಾಡುಗಳು

ಮೈಸೂರು
ವ್ಯವಸಾಯ ಶೋಧಕ ಸಂಘದ
ಪತ್ರಿಕೆ

ಸಂಪುಟ ೫	ಶುಕ್ಲ–ಶ್ರಾವಣ ೧೯೨೯	ಸಂಚಿಕೆ ೧೦

ರೈತ

ಶ್ರೀ ಕೆ. ವಿ. ಪುಟ್ಟಪ್ಪನವರು

ನೇಗಿಲ ಯೋಗಿಯು ನಾನು;
ಮಣ್ಣಿನ ಭೋಗಿಯು ನಾನು;
ಕೆರೆಗಳ ತೊರೆಗಳ ಗಳೆಯನು ನಾನು.

ಹೊಲಗಳ, ಬನಗಳ ದೊರೆ ನಾನು;
ಹೊಯ್ಯುವೆ, ಗಯ್ಯುವೆ, ಕೊಯ್ಯುವೆ ನಾನು;
ಉಣ್ಣುವೆ, ಉಣಿಸೀಯುವೆ ನಾನು;
ನೇಗಿಲ ಗೆರೆಯೇ ತೋರುವುದೆನಗೆ
ಮುಕ್ತಿಯ ಹಾದಿಯನು;
ವೇದಗಳೆಲ್ಲಾ ನೆಗೆನೆಗೆದರಿಯದ
ಅಂತ್ಯದ ಅದಿಯನು;
ನಸ್ಸಿಯನರಿಯುವೆ ಕರ್ಮದಲಿ!
ಸೊಗವನು ಕಾಣುವೆ ಧರ್ಮದಲಿ;
ಬದುಕಿ ಬಾಳಿ ನಾ ಗಯ್ಯುವೆ ನಲಿಯುವೆ
ಇಹಪರಗಳ ನಾ ಸಾಧಿಸುವೆ.

ಬದುಕಿ, ಬಾಳಿ, ಕರ್ತವ್ಯವ ಮಾಡಿ,
ಮೇಲಾಗುವುದನು ಬೋಧಿಸುವೆ!
ನೇಗಿಲ ಯೋಗಿಯು ನಾನು!
ಮಣ್ಣಿನ ಭೋಗಿಯು ನಾನು! —'ರಂಗಭೂಮಿ'

ಕಬ್ಬಿನ ವ್ಯವಸಾಯ

ಮ|| ಕೂರಪಾಡು ಗುಂಡಪ್ಪನವರಿಂದ

ನಮ್ಮ ದೇಶದಲ್ಲಿ ಬೆಳೆಯುವ ಲಾಭಕರವಾದ ಪೈರುಗಳ ಪೈಕಿ ಕಬ್ಬು ಒಂದು ಮುಖ್ಯವಾದ ಪೈರಾಗಿದೆ. ಆದ್ದರಿಂದ ಎಲ್ಲೆಲ್ಲಿ ಇದನ್ನು ಬೆಳೆಯುವದಕ್ಕೆ ಅವಕಾಶವಿದೆಯೋ ಅಲ್ಲೆಲ್ಲಾ ಕಬ್ಬನ್ನು ಬೆಳೆಯುವ ಪದ್ಧತಿಯುಂಟು. ಈ ದೇಶದಲ್ಲಿ ಕಬ್ಬು ಬಹಳ ಪುರಾತನವಾದ ಬೆಳೆ ಎಂದು ಹೇಳುತ್ತಾರೆ. ಸಂಸ್ಕೃತ ಕಾವ್ಯಗಳಲ್ಲಿ ಕಬ್ಬಿನ ವರ್ಣನೆಯು ಕಂಡುಬರುತ್ತದೆ. ಮೈಸೂರು ಸೀಮೆಗೆ ಕಬ್ಬು ಹೈದರ್‌ಆಲಿ ಕಾಲದಲ್ಲಿ ಬಂತೆಂದು ಕೆಲವರು ಹೇಳುತ್ತಾರೆ. ಸಾಧಾರಣವಾಗಿ ಬೆಳೆಯುವ ಕಬ್ಬಿನಲ್ಲಿ ಎರಡು ಜಾತಿಯುಂಟು. ಪಟಾವಳಿ ಅಥವಾ ಪಟಾಪಟಿ ಕಬ್ಬು ಮತ್ತು ರಸತಾಳಿ ಕಬ್ಬು. ಕೆಲವು ಕಡೆ ಒಂದನ್ನು, ಮತ್ತೊಂದು ಕಡೆ ಇನ್ನೊಂದನ್ನೂ ವಿಶೇಷವಾಗಿ ಬೆಳೆಯುತ್ತಾರೆ. ಸಾಮಾನ್ಯವಾಗಿ ಎರಡನ್ನೂ ಮಿಶ್ರವಾಗಿ ಬೆಳೆಯುವ ಪದ್ಧತಿಯುಂಟು. ಈ ಕಬ್ಬುಗಳಿಗೆ ನೀರಿನ ಆಸರೆ ಜೆನ್ನಾಗಿರಬೇಕು. ನೀರು ಕಡಿಮೆಯಾಗಿರುವ ಸ್ಥಳಗಳಲ್ಲಿ ಜೇಣಿ ಎನ್ನುವ ಕಬ್ಬನ್ನು ಬೆಳೆಯುತ್ತಾರೆ. ಸಾಧಾರಣವಾಗಿ ಕಬ್ಬಿನ ಪೈರು ಒಂದು ವರುಷದಲ್ಲಿ ಕಟಾವಿಗೆ ಬರುತ್ತದೆ. ಆದರೆ ಜೇಣಿ ಕಬ್ಬು ಹದಿನೆಂಟು ತಿಂಗಳು ಬೆಳೆಯಬೇಕಾಗಿರುತ್ತದೆ. ಕಬ್ಬಿಗೆ ಸಾಧಾರಣವಾಗಿ ಗೊಬ್ಬರ ಹಾಕಿದಷ್ಟೂ ಜೆನ್ನಾಗಿ ಬೆಳೆಯುತ್ತದೆ ಎಂಬುವುದು ಎಲ್ಲರಿಗೂ ತಿಳಿದದ್ದೇ ಆಗಿದೆ. ಈಚೀಚೆಗೆ ಹೊರಗಿನ ದೇಶಗಳಿಂದ ಅನೇಕ ತರಹ ಕಬ್ಬುಗಳನ್ನು ತರಿಸಿ, ಅವುಗಳನ್ನು ಪರೀಕ್ಷಿಸಿ ಅವುಗಳಿಂದ ಬಂದ ಸೂಲಂಗಿಗಳಿಂದ ಸಸಿಗಳನ್ನು ಉತ್ಪತ್ತಿಮಾಡಿ, ಅದರಲ್ಲಿ ಬಂದ ಕಬ್ಬನ್ನು ಪರೀಕ್ಷಿಸಿ, ಇವುಗಳಲ್ಲಿ ಉತ್ಕೃಷ್ಟವೆಂದು ತೋರಿದವುಗಳನ್ನು ರೈತರಿಗೆ ಹಂಚುವ ಏರ್ಪಾಡನ್ನು ಇಲಾಖೆಯವರು ಮಾಡಿದ್ದಾರೆ. ಇದರ ವಿಷಯವಾಗಿ ಬೇರೆ ಕಡೆ ವಿಶದವಾಗಿ ಬರೆದಿರುತ್ತದೆ.

ಪೂರ್ವ ವ್ಯವಸಾಯ

ಕಬ್ಬು ಬೆಳೆಯುವ ಭೂಮಿಯನ್ನು ಬಹಳ ಜೆನ್ನಾಗಿ ಕೃಷಿಮಾಡಬೇಕೆಂಬುದು ಎಲ್ಲರಿಗೂ ತಿಳಿದ ಅಂಶವೇ ಆಗಿದೆ. ಸಾಮಾನ್ಯವಾಗಿ ಮೇಲಿನಿಂದ ೮ ಅಂಗುಲದ ವರೆವಿಗಾದರೂ ಕೃಷಿಮಾಡಬೇಕು. ಈಚಿಗೆ ನಮಗೆ ದೊರಕಿರುವ ಕಬ್ಬಿಣದ ನೇಗಿಲುಗಳನ್ನು ಉಪಯೋಗಿಸಿದರೆ ಇಷ್ಟು ಕೆಲಸ ಸಾಧಾರಣವಾಗಿ ನಡೆಯುತ್ತದೆ. ಹಸಿಸಸಿ ಗೊಬ್ಬರವನ್ನು ಉಪಯೋಗಿಸಿದಾಗ ಈ ನೇಗಿಲುಗಳಿಂದ ಎರಡು ಸಲ ಉಳಬೇಕಾದ ಪ್ರಮೇಯವಿರುತ್ತದೆ. ನಮ್ಮ ನಾಡು ನೇಗಿಲನ್ನೇ ಉಪಯೋಗಿಸುವುದಾದರೆ ೧೮–೧೯ ಸಲವಾದರೂ ಉಳುವ ಅಭ್ಯಾಸವುಂಟು. ಹೀಗೆ ಮಾಡಿದರೆ ಸುಮಾರು ಆರು ಅಂಗುಲದಷ್ಟು ಭೂಮಿಯು ಕೃಷಿಮಾಡಲ್ಪಡುತ್ತದೆ. ಉತ್ತಮೇಲೆ ಬಂದ ಹೆಂಟೆಗಳನ್ನು ಒಜೆದು ಪುಡಿಮಾಡಿ ಭೂಮಿಯನ್ನು ಹಸನಾಗಿ ಮಾಡಬೇಕು. ನಾವು ಭೂಮಿಯನ್ನು ಜೆನ್ನಾಗಿ ಹಸನು ಮಾಡಿ

ದಷ್ಟೂ ಕಬ್ಬು ಜೆನ್ನಾಗಿ ಬೆಳೆಯುತ್ತದೆ. ತಟ್ಟೆ ಹಲುಬೆಯನ್ನು ಉಪಯೋಗಿಸುವುದಾದರೆ ಉತ್ತ ತಕ್ಷಣವೇ ಉಪಯೋಗಿಸಬೇಕು. ಹೀಗೆ ಮಾಡುವುದರಿಂದ ಮಣ್ಣಿನ ಹೆಂಟೆಗಳು ಸ್ವಲ್ಪ ಸ್ವಲ್ಪ ಹಸಿಯಾಗಿರುವಾಗಲೇ ಹಲುಬೆಗೆ ಸಿಕ್ಕಿ ಸುಲಭವಾಗಿ ಪುಡಿಪುಡಿಯಾಗುವ್ರವು. ಕಬ್ಬಿನ ಗದ್ದೆಯಲ್ಲಿ ಗೊಬ್ಬರವನ್ನು ಹರಡಿ ಅದನ್ನು ಮಣ್ಣಿನ ಜತೆಗೆ ಜೆನ್ನಾಗಿ ಬೆರೆಸಬೇಕಾದರೆ ತಟ್ಟೆ ಹಲುಬೆಯೇ ಉತ್ಕೃಷ್ಟವಾದದ್ದು. ಇದು ಇಲ್ಲದ ಪಕ್ಷದಲ್ಲಿ ಆರು ಹಲ್ಲಿನ ಹಲುಬೆಯನ್ನು ಉಪಯೋಗಿಸಬಹುದು. ಹಸಿಸಸಿ ಗೊಬ್ಬರವನ್ನು ಉಪಯೋಗಿಸಿದಾಗ ಅದನ್ನು ಕಬ್ಬನ್ನು ನಾಟುವುದಕ್ಕೆ ಒಂದು ತಿಂಗಳು ಮುಂಜೆಯೇ ಭೂಮಿಯೊಳಕ್ಕೆ ಸೇರಿಸಿಬಿಡಬೇಕು. ಇಲ್ಲವಾದರೆ ಕಬ್ಬನ್ನು ನಾಟುವುದಕ್ಕೆ ಸಾಲುಹೊಡಿಯುವಾಗ್ಯೆ ಇನ್ನೂ ಕೊಳೆಯದೆ ಇರುವ ಸೊಪ್ಪು ಮೇಲಕ್ಕೆ ಎದ್ದು ಬಂದುಬಿಡುತ್ತದೆ. ಮುಖ್ಯವಾಗಿ ಸಾಲುಹೊಡೆಯುವ ಕಾಲಕ್ಕೆ ಸೊಪ್ಪು ಕೊಳೆತು ಮಣ್ಣಾಗಿರಬೇಕು.

ಬೀಜವನ್ನು ಸಿದ್ಧಪಡಿಸಿಕೊಳ್ಳುವಿಕೆ

ಸಾಧಾರಣವಾಗಿ ನಾಟುವುದಕ್ಕೆ ಕಬ್ಬಿನ ತೊಂಡೆಯನ್ನೇ ಉಪಯೋಗಿಸುವುದು ರೂಢಿಯಲ್ಲಿದೆ. ಕಬ್ಬಿನ ಪೈರನ್ನು ಕಟಾವು ಮಾಡಿದಾಗ ತೊಂಡೆಗಳನ್ನೆಲ್ಲಾ ಬೇರೆ ಇಟ್ಟು ಅವನ್ನು ನಾಟುವುದಕ್ಕೆ ಉಪಯೋಗಿಸುವ ಪದ್ಧತಿಯು ಎಲ್ಲಾ ಕಡೆಯಲ್ಲಿಯೂ ಇದೆ. ಇದು ಸರಿಯಾದ ಪದ್ಧತಿಯೇ ಸರಿ. ಯಾತಕ್ಕೆಂದರೆ ಕಬ್ಬಿನ ತೊಂಡೆಗಳು ಜಾಗ್ರತೆಯಾಗಿಯೂ ಮತ್ತು ಒತ್ತಾಗಿಯೂ ಮೊಳೆಯುತ್ತವೆ. ಇದೂ ಅಲ್ಲದೆ ತೊಂಡೆಗಳನ್ನು ಗಾಣವಾಡಿದರೆ ಬೆಲ್ಲವು ಜೆನ್ನಾಗಿ ಆಗುವುದಿಲ್ಲ. ನಾಟುವುದಕ್ಕೆ ಬೇಕಾದಷ್ಟು ತೊಂಡೆಗಳು ಸಿಕ್ಕದೇ ಇರುವ ಪಕ್ಷದಲ್ಲಿ ಕಗ್ಗಂಟಿಯನ್ನು ಉಪಯೋಗಿಸುವುದರಲ್ಲಿ ಆಕ್ಷೇಪಣೆ ಏನೂ ಇರುವುದಿಲ್ಲ. ಆದರೆ ಇದರಿಂದ ಮೊಳಕೆಗಳು ಹೊರಡುವುದು ಸ್ವಲ್ಪ ಹಿಂದಾಗುತ್ತದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೂ ತೊಂಡೆಗಳನ್ನೆಲ್ಲಾ ನಾಟುವುದಕ್ಕೆ ಉಪಯೋಗಿಸಿ, ಕಗ್ಗಂಟಿಗಳನ್ನು ಮಾತ್ರ ಬೆಲ್ಲಮಾಡುವುದಕ್ಕೆ ಉಪಯೋಗಿಸಿದ್ದೇ ಆದರೆ ಬಹಳ ಅನುಕೂಲವಾಗಿರುತ್ತದೆ. ಸಾಧಾರಣವಾಗಿ ಕಬ್ಬನ್ನು ಬೀಜಕ್ಕೆ ಕತ್ತರಿಸುವಾಗ ಒಂದೊಂದು ಪೊಳಸಷ್ಟು ಕತ್ತರಿಸುವ ಪದ್ಧತಿಯುಂಟು. ಇದರಲ್ಲಿ ಎಷ್ಟು ಕಣ್ಣುಗಳಿರುತ್ತವೆ ಎಂಬುವುದಕ್ಕೆ ಸಾಧಾರಣವಾಗಿ ರೈತರು ಗಮನಕೊಡುವುದಿಲ್ಲ. ಸರಾಸರಿ ಮೂರು ನಾಲ್ಕು ಕಣ್ಣುಗಳಿರುತ್ತವೆ. ಹೀಗೆ ಒಂದು ಬೀಜಕ್ಕೆ ಮೂರು ಕಣ್ಣುಗಳಿರುವ ಹಾಗೆ ಕತ್ತರಿಸುವುದೇ ಉತ್ಕೃಷ್ಟವೆಂದು ತೋರಿಬಂದಿದೆ. ಕಬ್ಬನ್ನು ಬೀಜಕ್ಕೆ ಕತ್ತರಿಸುವಾಗ ರೋಗವಿಲ್ಲದಂತಹ ಕಬ್ಬುಗಳನ್ನೇ ಆರಿಸಿಕೊಳ್ಳಬೇಕು. ಹುಳುಗಳು ಕೊರೆದು ಅಥವಾ ಇನ್ನಾವುದಾದರೂ ಏಧಿನಿಂದ ಕಬ್ಬು ಕೆಟ್ಟುಹೋಗಿದ್ದು ಪಕ್ಷದಲ್ಲಿ ಅಂಥವುಗಳನ್ನು ತೆಗೆದುಹಾಕಬೇಕು. ಅಲ್ಲದೆ ಕಬ್ಬನ್ನು ಬೀಜಕ್ಕೆ ಕತ್ತರಿಸಿದ ಅನಂತರ ಅವುಗಳನ್ನು ಒಣಗುವುದಕ್ಕೆ ಬಿಡಬಾರದು. ಬೇಕಾದಷ್ಟು ಬೀಜಗಳನ್ನು ಕತ್ತರಿಸಿಕೊಂಡು ಅವುಗಳನ್ನು ತಕ್ಷಣವೇ ನಾಟುವುದು ಉತ್ತಮ ಪದ್ಧತಿ. ಹೀಗೆಲ್ಲಾ ಮಾಡಿದ ಪಕ್ಷದಲ್ಲಿ ನಾಟಿದ

ಕಬ್ಬೆಲ್ಲಾ ಚೆನ್ನಾಗಿ ಮೊಳೆತು ಜಮೀನಿನಲ್ಲಿ ಅಲ್ಲಲ್ಲಿ ಬೈಲು ಬಿಡದೆ ಒಂದೇ ಸಮನಾಗಿ ಹುಟ್ಟಿ ಬೆಳೆಯುವುದು.

ನಾಟುವ ವಿಧಾನ

ಕಬ್ಬಿನ ಪೈರಿಗೆ ನೀರು ಹಾಯಿಸಬೇಕಾಗಿರುವುದರಿಂದ ಜಮೀನನ್ನು ಉತ್ತು, ಹೆಂಟೆ ಒಡೆದ ಮೇಲೆ ಸಮನಾಗಿ ಮಾಡಬೇಕಾಗಿರುತ್ತದೆ. ಇದಕ್ಕೊಸ್ಕರ ಹೆಂಟೆಗಳನ್ನು ತಟ್ಟೆಯ ಹಲುಬೆಯಿಂದಲೋ ಅಥವಾ ಕೈಯಿಂದಲೋ ಚೆನ್ನಾಗಿ ಪುಡಿಮಾಡಿ, ಸಾಮಾನ್ಯವಾಗಿ ಉಪಯೋಗಿಸುವ ಹಲುಬೆಯಿಂದ ಭೂಮಿಯನ್ನು ನೀರು ಒಂದು ಕಡೆಯಿಂದ ಇನ್ನೊಂದು ಕಡೆಗೆ ನಿಧಾನವಾಗಿ ಹರಿಯುವಂತೆ ವಾರಡಿಯನ್ನಿಟ್ಟು ಸಮಮಾಡಬೇಕು. ಇದಾದನಂತರ ಸುಮಾರು ಹತ್ತು ಅಡಿ ಚದರವಾಗಿ ಪಾತಿಗಳನ್ನು ಮಾಡಿ, ಈ ಪಾತಿಗಳ ಮಧ್ಯೆ ಕಾಲುವೆಗಳಿರುವ ಹಾಗೆ ಮಾಡುವ ಪದ್ಧತಿ ಒಂದು. ಈ ಪಾತಿಗಳಲ್ಲಿ ಸುಮಾರು ಒಂದು ಗಜ ಅಂತರಕ್ಕೆ ಒಂದು ಗುಳಿಯಂತೆ ಸುಮಾರು ಒಂದು ಅಡಿ ಅಗಲ ಮತ್ತು ಅರ್ಧ ಅಡಿ ಆಳವುಳ್ಳ ಗುಳಿಗಳನ್ನು ತೆಗೆದು, ಈ ಗುಳಿಗಳೊಳಗೆ ಸ್ವಲ್ಪ ಗೊಬ್ಬರವನ್ನು ಹಾಕಿ ಮಣ್ಣಿನಲ್ಲಿ ವಿಶ್ರಮಾಡಿ ಪ್ರತಿಯೊಂದು ಗುಣಿಯಲ್ಲಿಯೂ ಎರಡರಿಂದ ಐದು ಕಬ್ಬಿನ ತುಂಡುಗಳವರೆವಿಗೂ ನಾಟುವ ಅಭ್ಯಾಸ ಕೆಲವು ಕಡೆಯಲ್ಲಿ ಉಂಟು. ಇದಕ್ಕೆ ಗುಳಿಕಬ್ಬು ಎಂದು ಹೆಸರು. ಇದರಲ್ಲಿಯೂ ಕೂಡ ಒಂದೊಂದು ಸ್ಥಳದಲ್ಲಿ ಒಂದೊಂದು ಸಂಪ್ರದಾಯವುಂಟು. ಹೀಗೆ ನಾಟಿದ ಅನಂತರ ಸುಮಾರು ಎರಡು ಮೂರು ತಿಂಗಳುಗಳ ಕಾಲ ಇವಕ್ಕೆ ಕೈನೀರು ಹಾಕುತ್ತಿರುತ್ತಾರೆ. ಇನ್ನೊಂದು ವಿಧದಲ್ಲಿ ಜಮೀನಿನ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಲುಗಳನ್ನು ಹೊಡೆದು ಆ ಸಾಲುಗಳಲ್ಲಿ ಕಬ್ಬಿನ ತುಂಡುಗಳನ್ನು ನಾಟುತ್ತಾರೆ. ಇದಕ್ಕೆ ಸಾಲು ಕಬ್ಬು ಎಂದು ಹೆಸರು. ಈ ಸಾಲುಗಳಲ್ಲಿ ಮೊದಲು ನೀರನ್ನು ಹಾಯಿಸಿ, ಸಾಲುಗಳು ಚೆನ್ನಾಗಿ ನೆನೆದ ಮೇಲೆ, ಕಬ್ಬಿನ ತುಂಡುಗಳನ್ನು ಸಾಲಿನಲ್ಲಿಟ್ಟು ಕೈಯಿಂದ ಭೂಮಿಯೊಳಕ್ಕೆ ಹೋಗುವ ಹಾಗೆ ಅದುಮಿಬಿಡಬೇಕು. ಈ ಎರಡು ಮಾರ್ಗಗಳ ಪೈಕಿ, ಯೋಚನೆಮಾಡಿ ನೋಡಿದರೆ, ಗುಣಿ ಕಬ್ಬು ಹಾಕುವುದರಲ್ಲಿ ಶ್ರಮ ಹೆಚ್ಚಾಗಿರುತ್ತದೆ. ಕೈಕೆಲಸ ಹೆಚ್ಚಾಗಿ ಮಾಡಬೇಕಾಗಿರುತ್ತದೆ. ಸಾಲು ಕಬ್ಬಿನಲ್ಲಿ ಇಷ್ಟು ಶ್ರಮವಿರುವುದಿಲ್ಲ. ಇದೂ ಅಲ್ಲದೆ ನಾಟುವುದರಲ್ಲಿಯೂ ಕೂಡ ಸಾಲು ಕಬ್ಬಿನಲ್ಲಿ ಶ್ರಮ ಕಡಿಮೆಯಾಗಿರುತ್ತದೆ. ಮತ್ತು ಪ್ರತಿಯೊಂದು ಗುಣಿಗೂ ಕೈಯಿಂದ ನೀರು ಹಾಕುವ ಶ್ರಮವಿರುವುದಿಲ್ಲ.

ಬೀಜಗಳಿಗೆ ಕೊಡಬೇಕಾದ ಅಂತರ

ಸಾಮಾನ್ಯವಾಗಿ ಸಾಲು ಕಬ್ಬು ಹಾಕಿದಾಗ ಸಾಲುಗಳನ್ನು ಬಹಳ ಹತ್ತಿರ ಹತ್ತಿರ ತೆಗೆಯುವ ಪದ್ಧತಿಯುಂಟು. ಒಂದು ಅಡಿ ಅಥವಾ ಒಂದೂವರೆ ಅಡಿ ಅಂತರ ಬಿಟ್ಟು ಸಾಲುಗಳನ್ನು ತೆಗೆಯುವ ವಾಡಿಕೆ ಇದೆ. ಹೀಗೆ ಮಾಡುವುದು ಸರಿಯಲ್ಲವೆಂದು ಊಹಿಸಿ, ಸಾಲಿನಿಂದ ಸಾಲಿಗೆ ಎಷ್ಟು ಅಂತರ ಬಿಡುವುದು ಸರಿಯೆನ್ನುವುದನ್ನು ನಿರ್ಧರಮಾಡಲು ಹೆಬ್ಬಾಳು ಪರೀಕ್ಷಾ ಕ್ಷೇತ್ರದಲ್ಲಿ ಕೆಲವು

ಪರೀಕ್ಷೆಗಳನ್ನು ಮಾಡಲಾಯಿತು. ಇವುಗಳ ಫಲಿತಾಂಶವನ್ನು ಕೆಳಗೆ ಕೊಟ್ಟಿರುತ್ತೆ:—

	ಎಕರೆಗೆ ಬಂದ ಕಬ್ಬಿನ ಜಲ್ಲೆಗಳು	ಎಕರೆಗೆ ಬಂದ ಕಬ್ಬಿನ ತೂಕ
1 ಅಡಿ ಸಾಲುಗಳು	39,204	25¼ ಟ್ರಗಳು
2 ಅಡಿ ಸಾಲುಗಳು	36,119	27 ,,
3 ಅಡಿ ಸಾಲುಗಳು	32,955	33¾ ,,

ಇದರಿಂದ ಮೂರಡಿ ಸಾಲಿನಲ್ಲಿ ಬೆಳೆಯುವುದು ಉತ್ತಮವಾಗಿ ಕಂಡುಬಂದಿತು. ಆಮೇಲೆ ಸಾಲಿನ ಅಂತರವನ್ನು ಇನ್ನೂ ಹೆಚ್ಚಿಸಿದರೆ ಏನು ಆಗುತ್ತದೋ ನೋಡುವ ಉದ್ದೇಶದಿಂದ ಕೆಳಗೆ ತೋರಿಸಿರುವ ಪರೀಕ್ಷೆಯನ್ನು ನಡೆಸಲಾಯಿತು:

	ಎಕರೆಗೆ ಬಂದ ಕಬ್ಬಿನ ಜಲ್ಲೆಗಳು	ಎಕರೆಗೆ ಬಂದ ಕಬ್ಬಿನ ತೂಕ
2 ಅಡಿ ಸಾಲುಗಳು	27,659	34½ ಟ್ರಗಳು
3 ಅಡಿ ಸಾಲುಗಳು	26,076	35¼ ,,
4 ಅಡಿ ಸಾಲುಗಳು	25,318	36½ ,,

ಸರಾಸರಿ ಲೆಕ್ಕದಲ್ಲಿ ೪ ಅಡಿ ಸಾಲುಗಳು ಕೆಲವು ವರ್ಷಗಳು ಹೆಚ್ಚಾಗಿ ಫಲ ಕೊಟ್ಟಾಗ್ಯೂ, ನಮ್ಮ ಹೆಬ್ಬಾಳು ಭೂಮಿಗೆ ೩ ಅಡಿ ಸಾಲುಗಳೇ ಉತ್ತಮವೆಂದು ತೋರಿಬಂತು. ಅದರ ಮೇರೆಗೆ ಈಗ ನಮ್ಮಲ್ಲಿ ಕಬ್ಬುಗಳನ್ನೆಲ್ಲಾ ಮೂರಡಿ ಸಾಲುಗಳಲ್ಲಿ ಹಾಕುತ್ತಿರುತ್ತೇವೆ. ಈ ಪರೀಕ್ಷೆಗಳಲ್ಲಿ ಇನ್ನೊಂದು ಅಂಶ ಕಂಡುಬರುತ್ತದೆ. ಸಾಲಿನ ಅಂತರ ಹೆಚ್ಚಿದಹಾಗೆಲ್ಲಾ ಕಬ್ಬಿನ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತದೆ. ಆದರೆ ಒಟ್ಟಿನ ಮೇಲೆ ತೂಕ ಹೆಚ್ಚಾಗುತ್ತದೆ. ಅದರಿಂದ ಬರುವ ಬೆಲ್ಲವೂ ಹೆಚ್ಚಾಗುತ್ತದೆ. ಅಂದರೆ ಕಬ್ಬುಗಳು ಮೊದಲಿಗಿಂತ ಈಗ ಪುಷ್ಟಿಯಾಗಿ ಬೆಳೆಯುತ್ತದೆಂದು ಪ್ರಮಾಣವಾಗುತ್ತದೆ. ಹೀಗೆ ಬೆಳೆಯುವುದರಿಂದ ಕಬ್ಬು ಅಷ್ಟು ಸುಲಭವಾಗಿ ಬಿದ್ದು ಮುರಿದುಹೋಗುವುದಿಲ್ಲವೆಂದು ಹೇಳಬಹುದು. ಇದಲ್ಲದೆ ಸಾಲಿನ ಅಂತರವನ್ನು ಹೆಚ್ಚಿಸಿದಹಾಗೂ ಬೀಜವರಿ ಕಡಿಮೆಯಾಗುತ್ತ ಬರುತ್ತದೆ ಎಂಬುವುದು ಎಲ್ಲರಿಗೂ ಸ್ಪಷ್ಟವಾಗಿಯೇ ಇರಬೇಕು. ಮತ್ತು ಕಳೆ ತೆಗೆಯುವುದೂ, ಅಗೆಯುವುದೂ, ಹಿಂಡಿಕೊಡುವುದೂ, ಮಣ್ಣು ಏರುಹಾಕುವುದೂ ಮತ್ತು ಕಬ್ಬು ಸುತ್ತುವುದೂ ಈ ಕೆಲಸಗಳನ್ನೆಲ್ಲಾ ಸುಲಭವಾಗಿಯೂ ಮತ್ತು ಸ್ವಲ್ಪ ಖರ್ಚಿನಿಂದಲೂ ಮಾಡಬಹುದಾಗಿದೆ. ಆದ್ದರಿಂದ ಸಾಧಾರಣವಾಗಿ ಕಬ್ಬು ಬೆಳೆಯುವವರು ೩ ಅಡಿ ಸಾಲಿನಲ್ಲಿ ಕಬ್ಬನ್ನು ನಾಟುವುದು ಲಾಭಕರವೆಂದು ತಿಳಿಯಬೇಕಾದ ಅಂಶವಾಗಿದೆ. ಸಾಲಿನಿಂದ ಸಾಲಿಗೆ ಬಿಡಬೇಕಾದ ಅಂತರವನ್ನು ನಿರ್ಧರಿಸಿದ ಮೇಲೆ, ಸಾಲಿನಲ್ಲಿ ಬೀಜ ಬೀಜಕ್ಕೆ ಎಷ್ಟು ಅಂತರ ಬಿಡಬೇಕೆಂಬುದನ್ನು ಪರೀಕ್ಷಿಸಲಾರಂಭಿಸಿದೆ. ಇದಕ್ಕೂ ನಾಲ್ಕು ತರಹೆಯಾಗಿ ಪರೀಕ್ಷೆ ಮಾಡಿದೆ. ಮೊದಲನೆಯದು ಸಾಲಿನಲ್ಲಿ ಒಂದನ್ನೊಂದು ಮುಟ್ಟುವ ಹಾಗೆ ಅಂತರವಿಲ್ಲದೆ ಬೀಜಗಳನ್ನಿಡುವುದು. ಎರಡನೆಯದು ಬೀಜ ಬೀಜಕ್ಕೆ ಒಂದು ಗೇಣು ಅಂತರವನ್ನು ಬಿಡುವುದು. ಮೂರನೆಯದು ಬೀಜದಿಂದ ಬೀಜಕ್ಕೆ ಎರಡು ಗೇಣು ಅಂತರ ಬಿಡುವುದು. ನಾಲ್ಕನೆಯದು ಒಂದೊಂದು ಕಡೆ ಎರ

ಡೆರಡು ಬೀಜಗಳನ್ನು ಒಂಟಿಯಾಗಿ ನಾಟಿ ಒಂದು ಜಂಟಿ ಬೀಜದಿಂದ ಇನ್ನೊಂದು ಜಂಟಿ ಬೀಜಕ್ಕೆ ಎರಡು ಗೇಣು ಅಂತರ ಬಿಡುವುದು.



ಇದುವರೆವಿಗೂ ನಡೆದಿರುವ ಪರೀಕ್ಷೆಯಿಂದ ಬೀಜದಿಂದ ಬೀಜಕ್ಕೆ ಒಂದು ಗೇಣು ಅಂತರ ಬಿಟ್ಟು ನೆಡುವುದೇ ಉತ್ತಮವೆಂದು ತೋರುತ್ತದೆ. ಇನ್ನು ಮುಂದೆ ಹೇಗೆ ಪರಿಣಮಿಸುವುದೋ ಹೇಳುವುದಸಾಧ್ಯ. ಇದುವರೆಗೆ ಬಂದಿರುವ ಫಲಿತಾಂಶ ವೇನೆಂದರೆ:—

	ಎಕರೆ ಒಂದಕ್ಕೆ	
	ಕಬ್ಬಿನ ಸಂಖ್ಯೆ	ಒಟ್ಟು ತೂಕ ಟ
ಅಂತರವಿಲ್ಲದ್ದು	.. 18,224	.. 30·5
ಒಂದು ಗೇಣು ಅಂತರವುಳ್ಳದ್ದು	.. 15,674	.. 33·3
ಎರಡು ಗೇಣು ಅಂತರವುಳ್ಳದ್ದು	.. 15,812	.. 28·8
ಎರಡು ಗೇಣು ಜಂಟಿ ಬೀಜ	.. 15,586	.. 27·1

ನೀರು ಕಟ್ಟುವುದು

ಕಬ್ಬಿನ ಪೈರನ್ನು ಚೆನ್ನಾಗಿ ಬೆಳೆಯಲು ಯಾವಾಗ್ಯೂ ಭೂಮಿಯು ತಂಪಾಗಿರಬೇಕಾಗಿರುವುದರಿಂದ ನೀರಾಸರೆ ಸರಿಯಾಗಿರುವ ಜಾಗಗಳಲ್ಲಿಯೇ ಇದನ್ನು ಬೆಳೆಯಬೇಕಾಗಿರುತ್ತದೆ. ಆದ್ದರಿಂದ ಸಾಧಾರಣವಾಗಿ ಕೆರೆಯ ಕೆಳಗೋ ಅಥವಾ ನಾಲೆಗಳ ಕೆಳಗೋ ಸದಾ ನೀರು ಇರುವಂಥಾ ಕಡೆಗಳಲ್ಲಿಯೇ ಬೆಳೆಯುತ್ತಾರೆ. ಆದ್ದರಿಂದ ಈಗ ಹೊಸದಾಗಿ ಕಾವೇರಿ ನದಿಯ ನಾಲೆಗಳನ್ನು ತೋಡುತ್ತಿರುವ ಪ್ರದೇಶಗಳಲ್ಲೆಲ್ಲಾ ಕಬ್ಬಿನ ಬೆಳವಣಿ ಹೆಚ್ಚಾಗುತ್ತದೆಂಬುವ ನಂಬಿಕೆ ಇದೆ. ಕಬ್ಬಿನ ಜಾತಿಗಳ ಪೈಕಿ ಮುರಗಬ್ಬಿನ ಜಾತಿಗೆ ಸಂಬಂಧಪಟ್ಟ ಚೇಣಿ ಕಬ್ಬು ಮಾತ್ರ ಕೆಲವು ಕಾಲಗಳಲ್ಲಿ ನೀರು ಕಡಿಮೆಯಾದಾಗ್ಯೂ ಸಾಧಾರಣವಾದ ಫಸಲನ್ನು ಕೊಡುತ್ತದೆ.

ಕಬ್ಬನ್ನು ಗುಣಿಗಳಲ್ಲಿ ನಾಟಿದಾಗ ಒಂದೆರಡಡಿ ಎತ್ತರ ಬೆಳೆಯುವವರಿವಿಗೂ ಕೈ ನೀರನ್ನು ಹಾಕುತ್ತಿರಬೇಕೆಂದು ಮೊದಲೇ ಹೇಳಿದೆ. ಆಮೇಲೆ ಗುಳಿಗಳ ಮಧ್ಯೆ ಕಾಲುವೆಗಳನ್ನು ತೆಗೆದು ಪ್ರತಿಯೊಂದು ಪಾತಿಗೂ ಪಾತಿಗಳ ಮಧ್ಯೆ ಇರುವ ನೀರು ಕಾಲುವೆಗಳಿಂದ ನೀರನ್ನು ಹಾಯಿಸಬೇಕು. ಸಾಲು ಕಬ್ಬನ್ನು ಹಾಕಿದಾಗ ಮೊದಲಿನಿಂದಲೂ ಸಾಲುಗಳಲ್ಲಿ ನೀರನ್ನು ಹಾಯಿಸುತ್ತಿರಬೇಕು. ಹೀಗೆ ಮಾಡುವಾಗ ಸಾಲುಗಳಿಗೆ ಅಡ್ಡನಾಗಿ ಭೂಮಿಯ ವಾರಡಿ ಪ್ರಕಾರ ಅಲ್ಲಲ್ಲಿ ಅಡ್ಡಕಾಲುವೆಗಳನ್ನು ತೆಗೆದು, ಈ ಅಡ್ಡಕಾಲುವೆಗಳಿಂದ ಸಾಲುಗಳಿಗೆ ಕ್ರಮವಾಗಿ ನೀರು ಹಾಯಿಸಬೇಕಾಗಿರುತ್ತದೆ. ಕೆಳಗೆ ತೋರಿಸಿರುವ ಚಿತ್ರದಲ್ಲಿ ಮೂರು ಅಡ್ಡಕಾಲುವೆಗಳನ್ನೂ, ಇವುಗಳಿಂದ ಸಾಲುಗಳಿಗೆ ನೀರು ಹೋಗುವ ರೀತಿಯನ್ನೂ ತೋರಿಸಿದೆ.



ಭೂಮಿಯು ಸಮನಾಗಿದ್ದ ಪಕ್ಷದಲ್ಲಿ ಈ ಅಡ್ಡಕಾಲುವೆಗಳು ಅವಶ್ಯಕವೇ ಇರುವುದಿಲ್ಲ. ತಲೆ ಕಾಲುವೆಯಿಂದಲೇ ಸಾಲುಗಳಿಗೆ ನೀರನ್ನು ಬಿಡಬಹುದು. ಈ ನೀರು ಕಟ್ಟುವುದರಲ್ಲಿ ಸ್ವಲ್ಪ ಜಾಗರೂಕತೆಯನ್ನು ತೋರಿಸಬೇಕು. ಸಾಲಿನಲ್ಲಿ ನೀರು ನಿಧಾನವಾಗಿ ಹೋಗಬೇಕು. ಹೀಗೆ ನೀರು ಕಟ್ಟುವುದರಿಂದ ಭೂಮಿಯೆಲ್ಲವೂ ಚೆನ್ನಾಗಿ ನೆನೆಯುತ್ತದೆ. ಇದು ಬಿಟ್ಟು ಕೆಲಸ ಮುಗಿಸ ಬೇಕೆಂದು ಆತುರಪಟ್ಟು ಸಾಲಿನಲ್ಲಿ ನೀರು ಜಾಗ್ರತೆಯಾಗಿ ಹೋಗುವ ಹಾಗೆ ಬಿಟ್ಟರೆ ಭೂಮಿಯು ಸಮನಾಗಿ ನೆನೆಯುವುದಿಲ್ಲ. ಆದರಿಂದ ಪೈರೂ ಸಮ ನಾಗಿ ಬೆಳೆಯುವುದಿಲ್ಲ. ಸಾಧಾರಣವಾಗಿ ಹತ್ತು ದಿನಕ್ಕೊಂದು ಸಲ ನೀರು ಕಟ್ಟಬಹುದು. ಆದರೆ ಭೂಮಿಯಲ್ಲಿ ತಂಪು ಕಡಿಮೆಯಾದುದನ್ನು ನೋಡಿ ನೀರು ಕೊಡುವುದು ಮುಖ್ಯವೇ ಹೊರತು ದಿನಗಳ ಗಡವು ಮುಖ್ಯವಲ್ಲ. ಎಷ್ಟು ದಿನಕ್ಕೊಂದು ಸಲ ನೀರು ಕಟ್ಟಬೇಕೆಂಬುವುದನ್ನು ಭೂಗುಣ, ನೀರು ಕಟ್ಟುವ

ವಿಧಾನ ಮತ್ತು ಮಳೆ ಬಂದಿರುವುದು ಇಲ್ಲದ್ದು—ಇವುಗಳನ್ನು ಗಣನೆಮಾಡಿ ನಿರ್ಧರಮಾಡಬೇಕಾಗಿರುತ್ತದೆ.

ಜೋಪು ನೀರು ಹೊರಡಿಸುವುದು

ಕಬ್ಬಿನ ಪೈರಿಗೆ ಭೂಮಿಯು ಯಾವಾಗ್ಯೂ ತಂಪಾಗಿರಬೇಕೆಂದು ಹೇಳಿದ ಮಾತ್ರಕ್ಕೇ ಭೂಮಿಯಲ್ಲಿ ನೀರು ಸದಾ ನಿಂತಿರಬೇಕೆಂದು ಅರ್ಥವಲ್ಲ. ಹೀಗೆ ಸ್ವಲ್ಪಮಟ್ಟಿಗಾದರೂ ನೀರು ನಿಂತರೆ ಕಬ್ಬು ಸರಿಯಾಗಿ ಬೆಳೆಯುವುದಿಲ್ಲ. ಕಬ್ಬು ಉತ್ಕೃಷ್ಟವಾಗಿ ಬೆಳೆಯಬೇಕಾದರೆ ಭೂಮಿಯಲ್ಲಿ ವಾಯು ಸಂಚಾರಕ್ಕೆ ಮಾರ್ಗ ವಿರಲೇ ಬೇಕು. ಆದ್ದರಿಂದ ಯಾವ ಕಾರಣದಿಂದಲಾದರೂ ಭೂಮಿಯಲ್ಲಿ ತೇವವು ಹೆಚ್ಚಾಗಿ ನಿಲ್ಲುವದೆಂಬ ಭಯವಿದ್ದಲ್ಲಿ ಆಂಥಾ ಹೆಚ್ಚು ತೇವವನ್ನು ಹೊರಗೆ ಹೊರಡಿಸುವ ಉಪಾಯವನ್ನು ಹುಡುಕಬೇಕಾಗಿರುತ್ತದೆ. ಹೀಗೆ ಮಾಡಬೇಕಾದರೆ ಸಾಮಾನ್ಯವಾಗಿ ಭೂಮಿಯಲ್ಲಿ ಕಡಂಗುಗಳನ್ನು ಹೊಡೆದು ನೀರನ್ನು ಹೊರಡಿಸುವ ಪದ್ಧತಿ ಇದೆ. ಇಂಥಾ ಕಡಂಗುಗಳನ್ನು ಚೊಕ್ಕಟವಾಗಿ ಇಟ್ಟುಕೊಂಡಿರುವುದು ಸ್ವಲ್ಪ ಪ್ರಯಾಸಕರವಾಗಿರುತ್ತದೆ. ಏಕೆಂದರೆ ಬಹಳ ಜಾಗ್ರತೆಯಾಗಿ ಇವುಗಳೊಳಗೆ ಕಳೆಗಳು ಬೆಳೆದು ಕಡಂಗುಗಳೇ ಮುಚ್ಚಿಹೋಗುವ ಸಂಭವವಿರುತ್ತದೆ. ಪದೇ ಪದೇ ಕಳೆಗಳನ್ನು ತೆಗೆದು ಕಡಂಗುಗಳನ್ನು ಶುಭ್ರವಾಗಿ ಇಟ್ಟುಕೊಂಡಿರಬೇಕು. ಈ ಪ್ರಯತ್ನವನ್ನು ಕದಿಮೆಮಾಡಿಕೊಳ್ಳಬೇಕೆಂಬ ಆಶೆಯುಳ್ಳವರು ಎರಡು ಉಪಾಯಗಳನ್ನು ಮಾಡಬಹುದು. ಸರಿಯಾದ ಕಡಂಗುಗಳನ್ನು ತೆಗೆದು ಅವುಗಳಲ್ಲಿ ಹಳ್ಳಿಗಳಲ್ಲಿ ಕುಂಬಾರರು ಮಾಡುವ ಮಡಿಕೆ ಹೆಂಚುಗಳನ್ನು ಸೀಳಿದೆ, ಒಂದರೊಳಗೊಂದನ್ನು ಸೇರಿಸಿ ಸಮನಾಗಿ ಇಟ್ಟು ಕೊಂಡು ಬಂದು ಅದರಮೇಲೆ ಮಣ್ಣನ್ನು ಮುಚ್ಚಿಬಿಡಬಹುದು. ಇದು ತಿಳಿದವರೇ ಮಾಡಬೇಕಾದ ಕೆಲಸವಾದ್ದರಿಂದ ಹೀಗೆ ಮಾಡಲಪೇಕ್ಷಿಸುವವರು ವ್ಯವಸಾಯ ಶಾಖೆಯ ಅಧಿಕಾರಿಗಳ ಸಹಾಯವನ್ನು ಹೊಂದುವುದು ಅವಶ್ಯಕವಾಗಿದೆ. ಹೀಗೆ ಇಟ್ಟುಕೊಂಡು ಬಂದ ಹೆಂಚುಗಳ ಕೊಸೆಯನ್ನು ತಂತಿಯ ಬರಡಿಯಿಂದ ಮುಚ್ಚಿಡಬೇಕು. ಹೀಗೆ ಮಾಡುವುದರಿಂದ ಅದರೊಳಗೆ ಇಲಿ, ಏಡಿ ಮುಂತಾದುವುಗಳು ಹೋಗುವುದಕ್ಕೆ ಅವಕಾಶವಿರುವುದಿಲ್ಲ. ಸಾಮಾನ್ಯವಾಗಿ ಸಿಕ್ಕುವ ಹೆಂಚುಗಳು ತೆಳುವಾಗಿರುತ್ತವೆಯಾದಕಾರಣ, ಕುಂಬಾರರಿಗೆ ಹೇಳಿ ಸ್ವಲ್ಪ ದಪ್ಪನಾಗಿರುವ ಹೆಂಚುಗಳನ್ನು ಮಾಡಿಸುವುದು ಉತ್ತಮ. ಕಡಂಗುಗಳ ತಳವನ್ನು ಹಳ್ಳದಿಣ್ಣೆಗಳಿಲ್ಲದೆ ಸಮನಾಗಿಮಾಡಿ, ಸರಿಯಾದ ವಾರಡಿಯನ್ನು ಕೊಟ್ಟು ಅನಂತರ ಈ ಹೆಂಚುಗಳನ್ನು ಚಾಗರೂಕತೆಯಾಗಿಟ್ಟು, ಇವುಗಳನ್ನು ಕದಲಿಸದಂತೆ ಮಣ್ಣುಹಾಕಿ ಮುಚ್ಚಿಬಿಡಬೇಕು. ಈ ಕಡಂಗುಗಳು ಸಾಮಾನ್ಯವಾಗಿ ಭೂಮಿಯಲ್ಲಿ ಮೂರಡಿ ಆಳದಲ್ಲಿರಬೇಕು. ಇದಕ್ಕಿಂತ ಬಹಳ ಕೆಳಗಿದ್ದರೆ ಜಾಗನ್ನು ಸರಿಯಾಗಿ ಹೊರಡಿಸುವುದಿಲ್ಲ. ಬಹಳ ಮೇಲಿದ್ದರೆ ಭೂಮಿಯಲ್ಲಿರುವ ತೇವವನ್ನೆಲ್ಲಾ ಜಾಗ್ರತೆಯಾಗಿ ಇಂಗಿಸಿಬಿಟ್ಟು, ಒಣಗಿಸಿ ಬಿಡುತ್ತದೆಯಾದ್ದರಿಂದ ಪದೇ ಪದೆ ನೀರನ್ನು ಕೊಡಬೇಕಾಗಿ ಬರುತ್ತದೆಯಲ್ಲದೆ

ಕಬ್ಬಿನ ಬೇರುಗಳು ಹೆಂಚುಗಳ ಒಳಗೆ ಹೊಕ್ಕು, ಅವುಗಳಲ್ಲಿ ನೀರು ಸರಾಗವಾಗಿ ಹರಿಯುವುದಕ್ಕೆ ಕುಂದಕವಾಗುತ್ತದೆ. ಹೀಗೆ ಹೆಂಚುಗಳನ್ನು ಹವಣಿಸುವುದು ಸುಲಭವಲ್ಲದಿದ್ದರೆ ದೊಡ್ಡ ಜಲ್ಲಿಯನ್ನು ಕಡಂಗುಗಳ ತಳದಲ್ಲಿ ಹೆಂಚುಗಳ ಬದಲಾಗಿ ಸುಮಾರು ಮುಕ್ಕಾಲಡಿಯಷ್ಟು ಹಾಕಿ ಅದರಮೇಲೆ ಮಣ್ಣು ಹಾಕಿ ಮುಚ್ಚಿಬಿಡಬಹುದು. ಇದೂ ಸಹ ಸ್ವಲ್ಪ ಜಾಗರೂಕತೆಯಿಂದ ಮಾಡಬೇಕಾದ ಕೆಲಸವಾದ್ದರಿಂದ, ತಿಳಿದವರ ಸಹಾಯವನ್ನು ಪಡೆದು ಕೆಲಸಮಾಡುವುದು ಒಳ್ಳೆಯದು.

ಅನಂತರ ವ್ಯವಸಾಯ

ಕಳೆ ತೆಗೆಯುವುದು, ಅಗತೆಕೊಡುವುದು, ಮಣ್ಣು ಏರುಹಾಕುವುದು ಇವೆಲ್ಲಾ ಮುಖ್ಯವಾದ ಕೆಲಸಗಳು. ಇಷ್ಟೇ ಸಲ ಕಳೆ ತೆಗೆಯಬೇಕು ಎಂದು ಹೇಳಲು ಸಾಧ್ಯವಿಲ್ಲ. ಮುಖ್ಯವಾಗಿ ಜಮೀನಿನಲ್ಲಿ ಕಳೆಗಳಿಲ್ಲದಂತೆ ನೋಡಿಕೊಳ್ಳಬೇಕು. ಸಾಮಾನ್ಯವಾಗಿ ಮೂರು ಅಗತೆಗಳನ್ನು ಕೊಡುವ ವಾಡಿಕೆಯುಂಟು. ಐದು ತಿಂಗಳಿಗೊಂದುಸಲ, ಆರೂವರೆ ತಿಂಗಳಿಗೊಂದುಸಲ, ಎಂಟು ತಿಂಗಳಿಗೊಂದು ಸಲ. ಇದರಲ್ಲಿಯೂ ಕಟ್ಟುನಿಟ್ಟಾಗಿ ಹೇಳಲು ಸಾಧ್ಯವಿಲ್ಲ. ಕಬ್ಬಿನ ಬೆಳೆಯನ್ನು ನೋಡಿ ಸಕಾಲದಲ್ಲಿ ಅಗತೆಯನ್ನು ಕೊಡಬೇಕು. ಪ್ರತಿಯೊಂದು ಅಗತೆಯನ್ನು ಕೊಟ್ಟಮೇಲೂ ಮಣ್ಣನ್ನು ಕಬ್ಬಿನ ಸಾಲಿನಮೇಲೆ ಏರುಹಾಕಬೇಕು. ಹೀಗೆ ಏರುಹಾಕುವ ಮುಂಜೆ ಪುಡಿನಾಡಿದ ಹಿಂಡಿಯನ್ನು ಸಾಲುಗಳಲ್ಲಿ ಕೊಟ್ಟು ಅದರ ಮೇಲೆ ಮಣ್ಣನ್ನು ಏರುಹಾಕುವುದು ಉತ್ತಮ. ಎಷ್ಟು ಹಿಂಡಿ ಕೊಡಬೇಕು, ಇನ್ನೂ ಯಾವ ಇತರೆ ಗೊಬ್ಬರಗಳನ್ನು ಕೊಡಬೇಕು, ಇವುಗಳನ್ನು ಎಷ್ಟು ಕೊಡಬೇಕು, ಯಾವ ಯಾವ ಕಾಲದಲ್ಲಿ ಕೊಡಬೇಕು ಎಂಬ ಅಂಶಗಳನ್ನು ಜೀರೆ ಕಡೆ ಹೇಳಲಾಗಿದೆ. ಹೆಚ್ಚಾಗಿ ಕಬ್ಬನ್ನು ಬೆಳೆಯುವವರು ಭೂಮಿಯನ್ನು ಅಗೆಯುವುದು, ಮಣ್ಣನ್ನು ಏರುಹಾಕುವುದು ಈ ಕೆಲಸಗಳನ್ನು ಯಂತ್ರಗಳ ಸಹಾಯದಿಂದ ಮಾಡುತ್ತಾರೆ.

ಸುತ್ತುವುದು

ಬಹಳ ಕಡೆಗಳಲ್ಲಿ ಕಬ್ಬನ್ನು ಸುತ್ತುವ ಅಭ್ಯಾಸವಿದೆ. ಒಂದು ಗುಮ್ಮಿಯಲ್ಲಿರುವ ಕಬ್ಬುಗಳನ್ನೆಲ್ಲಾ ಸೇರಿಸಿ ಒಣಗಿದ ಮತ್ತು ಒಣಗುತ್ತಿರುವ ಎಲೆಗಳಿಂದ ಇವುಗಳನ್ನು ಬಿಗಿಯಾಗಿ ಸುತ್ತುವುದರಿಂದ ಕಬ್ಬುಗಳು ಸುಲಭವಾಗಿ ಕೆಳಗೆ ಬಿದ್ದು ಮುರಿಯುವುದಿಲ್ಲ. ಹೀಗೆ ಮಾಡುವುದರಿಂದ ಸರಿಗಳ ಪಾವಳಿ ಕಡಿಮೆಯಾಗುತ್ತೆಂಬ ನಂಬಿಕೆಯೂ ಕೆಲವು ಕಡೆ ಇದೆ. ಚೇಣಿ ಕಬ್ಬನ್ನು ಸುತ್ತುವ ಪದ್ಧತಿ ಇರುವುದಿಲ್ಲ. ಎರಡು ಮೂರುಸಲ ಸುತ್ತುವ ಪದ್ಧತಿಯುಂಟು. ಹೀಗೆ ಸುತ್ತುವುದಕ್ಕೆ ಸುಮಾರು ಎಕರೆ ಒಂದಕ್ಕೆ ೪೦ ರೂಪಾಯಿ ವೆಚ್ಚವಾಗುತ್ತದೆ. ಈ ಕೆಲಸದಿಂದ ಗುಣವೇನಾದರೂ ಉಂಟೆ ಎಂಬುದನ್ನು ಪರೀಕ್ಷೆಮಾಡಿನೋಡಲು, ಕೆಳಗೆ ತೋರಿಸಿರುವ ಫಲಿತಾಂಶವು ಕಂಡುಬಂದಿರುವುದು :—

ವಿಧಾನ ಮತ್ತು ಮಳೆ ಬಂದಿರುವುದು ಇಲ್ಲದ್ದು—ಇವುಗಳನ್ನು ಗಣನೆಮಾಡಿ ನಿರ್ಧರಮಾಡಬೇಕಾಗಿರುತ್ತದೆ.

ಜೋಪು ನೀರು ಹೊರಡಿಸುವುದು

ಕಬ್ಬಿನ ಪೈರಿಗೆ ಭೂಮಿಯು ಯಾವಾಗ್ಯೂ ತಂವಾಗಿರಬೇಕೆಂದು ಹೇಳಿದ ಮಾತ್ರಕ್ಕೇ ಭೂಮಿಯಲ್ಲಿ ನೀರು ಸದಾ ನಿಂತಿರಬೇಕೆಂದು ಅರ್ಥವಲ್ಲ. ಹೀಗೆ ಸ್ವಲ್ಪಪಟ್ಟಿಗಾದರೂ ನೀರು ನಿಂತರೆ ಕಬ್ಬು ಸರಿಯಾಗಿ ಬೆಳೆಯುವುದಿಲ್ಲ. ಕಬ್ಬು ಉತ್ಕೃಷ್ಟವಾಗಿ ಬೆಳೆಯಬೇಕಾದರೆ ಭೂಮಿಯಲ್ಲಿ ವಾಯು ಸಂಚಾರಕ್ಕೆ ಮಾರ್ಗ ವಿರಲೇ ಬೇಕು. ಆದ್ದರಿಂದ ಯಾವ ಕಾರಣದಿಂದಲಾದರೂ ಭೂಮಿಯಲ್ಲಿ ತೇವವು ಹೆಚ್ಚಾಗಿ ನಿಲ್ಲುವದೆಂಬ ಭಯವಿದ್ದಲ್ಲಿ ಅಂಥಾ ಹೆಚ್ಚು ತೇವವನ್ನು ಹೊರಗೆ ಹೊರಡಿಸುವ ಉಪಾಯವನ್ನು ಹುಡುಕಬೇಕಾಗಿರುತ್ತದೆ. ಹೀಗೆ ಮಾಡಬೇಕಾದರೆ ಸಾಮಾನ್ಯವಾಗಿ ಭೂಮಿಯಲ್ಲಿ ಕಡಂಗುಗಳನ್ನು ಹೊಡೆದು ನೀರನ್ನು ಹೊರಡಿಸುವ ಪದ್ಧತಿ ಇದೆ. ಇಂಥಾ ಕಡಂಗುಗಳನ್ನು ಜೊಕ್ಕಟವಾಗಿ ಇಟ್ಟುಕೊಂಡಿರುವುದು ಸ್ವಲ್ಪ ಪ್ರಯಾಸಕರವಾಗಿರುತ್ತದೆ. ಏಕೆಂದರೆ ಬಹಳ ಜಾಗ್ರತೆಯಾಗಿ ಇವುಗಳೊಳಗೆ ಕಳೆಗಳು ಬೆಳೆದು ಕಡಂಗುಗಳೇ ಮುಚ್ಚಿಹೋಗುವ ಸಂಭವವಿರುತ್ತದೆ. ಪದೇ ಪದೇ ಕಳೆಗಳನ್ನು ತೆಗೆದು ಕಡಂಗುಗಳನ್ನು ಶುಭ್ರವಾಗಿ ಇಟ್ಟುಕೊಂಡಿರಬೇಕು. ಈ ಶ್ರಮವನ್ನು ಕಡಿಮೆಮಾಡಿಕೊಳ್ಳಬೇಕೆಂಬ ಆಶೆಯುಳ್ಳವರು ಎರಡು ಉಪಾಯಗಳನ್ನು ಮಾಡಬಹುದು. ಸರಿಯಾದ ಕಡಂಗುಗಳನ್ನು ತೆಗೆದು ಅವುಗಳಲ್ಲಿ ಹಳ್ಳಿಗಳಲ್ಲಿ ಕುಂಬಾರರು ಮಾಡುವ ಮಡಿಕೆ ಹೆಂಚುಗಳನ್ನು ಸೀಳದೆ, ಒಂದರೊಳಗೊಂದನ್ನು ಸೇರಿಸಿ ಸಮನಾಗಿ ಇಟ್ಟು ಕೊಂಡು ಬಂದು ಅದರಮೇಲೆ ಮಣ್ಣನ್ನು ಮುಚ್ಚಿಬಿಡಬಹುದು. ಇದು ತಿಳಿದವರೇ ಮಾಡಬೇಕಾದ ಕೆಲಸವಾದ್ದರಿಂದ ಹೀಗೆ ಮಾಡಲಪೇಕ್ಷಿಸುವವರು ವ್ಯವಸಾಯ ಶಾಖೆಯ ಅಧಿಕಾರಿಗಳ ಸಹಾಯವನ್ನು ಹೊಂದುವುದು ಅವಶ್ಯಕವಾಗಿದೆ. ಹೀಗೆ ಇಟ್ಟುಕೊಂಡು ಬಂದ ಹೆಂಚುಗಳ ಕೊನೆಯನ್ನು ತಂತಿಯ ಜರಡಿಯಿಂದ ಮುಚ್ಚಿಡಬೇಕು. ಹೀಗೆ ಮಾಡುವುದರಿಂದ ಅದರೊಳಗೆ ಇಲಿ, ಏಡಿ ಮುಂತಾದುವುಗಳು ಹೋಗುವುದಕ್ಕೆ ಅವಕಾಶವಿರುವುದಿಲ್ಲ. ಸಾಮಾನ್ಯವಾಗಿ ಸಿಕ್ಕುವ ಹೆಂಚುಗಳು ತೆಳುವಾಗಿರುತ್ತವೆಯಾದಕಾರಣ, ಕುಂಬಾರರಿಗೆ ಹೇಳಿ ಸ್ವಲ್ಪ ದಪ್ಪನಾಗಿರುವ ಹೆಂಚುಗಳನ್ನು ಮಾಡಿಸುವುದು ಉತ್ತಮ. ಕಡಂಗುಗಳ ತಳವನ್ನು ಹಳ್ಳದಿಣ್ಣೆಗಳಿಲ್ಲದೆ ಸಮನಾಗಿಮಾಡಿ, ಸರಿಯಾದ ವಾರಡಿಯನ್ನು ಕೊಟ್ಟು ಅನಂತರ ಈ ಹೆಂಚುಗಳನ್ನು ಜಾಗರೂಕತೆಯಾಗಿಟ್ಟು, ಇವುಗಳನ್ನು ಕದಲಿಸದಂತೆ ಮಣ್ಣುಹಾಕಿ ಮುಚ್ಚಿಬಿಡಬೇಕು. ಈ ಕಡಂಗುಗಳು ಸಾಮಾನ್ಯವಾಗಿ ಭೂಮಿಯಲ್ಲಿ ಮೂರಡಿ ಆಳದಲ್ಲಿರಬೇಕು. ಇದಕ್ಕಿಂತ ಬಹಳ ಕೆಳಗಿದ್ದರೆ ಜೌಗನ್ನು ಸರಿಯಾಗಿ ಹೊರಡಿಸುವುದಿಲ್ಲ. ಬಹಳ ಮೇಲಿದ್ದರೆ ಭೂಮಿಯಲ್ಲಿರುವ ತೇವವನ್ನೆಲ್ಲಾ ಜಾಗ್ರತೆಯಾಗಿ ಇಂಗಿಸಿಬಿಟ್ಟು, ಒಣಗಿಸಿ ಬಿಡುತ್ತದೆಯಾದ್ದರಿಂದ ಪದೇ ಪದೆ ನೀರನ್ನು ಕೊಡಬೇಕಾಗಿ ಬರುತ್ತದೆಯಲ್ಲದೆ

ಕಬ್ಬಿನ ಬೇರುಗಳು ಹೆಂಚುಗಳ ಒಳಗೆ ಹೊಕ್ಕು, ಅವುಗಳಲ್ಲಿ ನೀರು ಸರಾಗವಾಗಿ ಹರಿಯುವುದಕ್ಕೆ ಕುಂದಕವಾಗುತ್ತದೆ. ಹೀಗೆ ಹೆಂಚುಗಳನ್ನು ಹವಣಿಸುವುದು ಸುಲಭವಲ್ಲದಿದ್ದರೆ ದೊಡ್ಡ ಜಲ್ಲಿಯನ್ನು ಕಡಂಗುಗಳ ತಳದಲ್ಲಿ ಹೆಂಚುಗಳ ಬದಲಾಗಿ ಸುಮಾರು ಮುಕ್ಕಾಲಡಿಯಷ್ಟು ಹಾಕಿ ಅದರಮೇಲೆ ಮಣ್ಣು ಹಾಕಿ ಮುಚ್ಚಿಬಿಡಬಹುದು. ಇದೂ ಸಹ ಸ್ವಲ್ಪ ಜಾಗರೂಕತೆಯಿಂದ ಮಾಡಬೇಕಾದ ಕೆಲಸವಾದ್ದರಿಂದ, ತಿಳಿದವರ ಸಹಾಯವನ್ನು ಪಡೆದು ಕೆಲಸಮಾಡುವುದು ಒಳ್ಳೆಯದು.

ಅನಂತರ ವ್ಯವಸಾಯ

ಕಳೆ ತೆಗೆಯುವುದು, ಅಗತೆಕೊಡುವುದು, ಮಣ್ಣು ಏರುಹಾಕುವುದು ಇವೆಲ್ಲಾ ಮುಖ್ಯವಾದ ಕೆಲಸಗಳು. ಇಷ್ಟೇ ಸಲ ಕಳೆ ತೆಗೆಯಬೇಕು ಎಂದು ಹೇಳಲು ಸಾಧ್ಯವಿಲ್ಲ. ಮುಖ್ಯವಾಗಿ ಜಮೀನಿನಲ್ಲಿ ಕಳೆಗಳಿಲ್ಲದಂತೆ ನೋಡಿಕೊಳ್ಳಬೇಕು. ಸಾಮಾನ್ಯವಾಗಿ ಮೂರು ಅಗತೆಗಳನ್ನು ಕೊಡುವ ವಾಡಿಕೆಯುಂಟು. ಐದು ತಿಂಗಳಿಗೊಂದುಸಲ, ಆರೂವರೆತಿಂಗಳಿಗೊಂದುಸಲ, ಎಂಟು ತಿಂಗಳಿಗೊಂದುಸಲ. ಇದರಲ್ಲಿಯೂ ಕಟ್ಟುನಿಟ್ಟಾಗಿ ಹೇಳಲು ಸಾಧ್ಯವಿಲ್ಲ. ಕಬ್ಬಿನ ಬೆಳೆಯನ್ನು ನೋಡಿ ಸಕಾಲದಲ್ಲಿ ಅಗತೆಯನ್ನು ಕೊಡಬೇಕು. ಪ್ರತಿಯೊಂದು ಅಗತೆಯನ್ನು ಕೊಟ್ಟಮೇಲೂ ಮಣ್ಣನ್ನು ಕಬ್ಬಿನ ಸಾಲಿನಮೇಲೆ ಏರುಹಾಕಬೇಕು. ಹೀಗೆ ಏರುಹಾಕುವ ಮುಂಜೆ ಪುಡಿಮಾಡಿದ ಹಿಂಡಿಯನ್ನು ಸಾಲುಗಳಲ್ಲಿ ಕೊಟ್ಟು ಅದರ ಮೇಲೆ ಮಣ್ಣನ್ನು ಏರುಹಾಕುವುದು ಉತ್ತಮ. ಎಷ್ಟು ಹಿಂಡಿ ಕೊಡಬೇಕು, ಇನ್ನೂ ಯಾವ ಇತರೆ ಗೊಬ್ಬರಗಳನ್ನು ಕೊಡಬೇಕು, ಇವುಗಳನ್ನು ಎಷ್ಟು ಕೊಡಬೇಕು, ಯಾವ ಯಾವ ಕಾಲದಲ್ಲಿ ಕೊಡಬೇಕು ಎಂಬ ಅಂಶಗಳನ್ನು ಬೇರೆ ಕಡೆ ಹೇಳಲಾಗಿದೆ. ಹೆಚ್ಚಾಗಿ ಕಬ್ಬನ್ನು ಬೆಳೆಯುವವರು ಭೂಮಿಯನ್ನು ಅಗೆಯುವುದು, ಮಣ್ಣನ್ನು ಏರುಹಾಕುವುದು ಈ ಕೆಲಸಗಳನ್ನು ಯಂತ್ರಗಳ ಸಹಾಯದಿಂದ ಮಾಡುತ್ತಾರೆ.

ಸುತ್ತುವುದು

ಬಹಳ ಕಡೆಗಳಲ್ಲಿ ಕಬ್ಬನ್ನು ಸುತ್ತುವ ಅಭ್ಯಾಸವಿದೆ. ಒಂದು ಗುಮ್ಮೆಯಲ್ಲಿರುವ ಕಬ್ಬುಗಳನ್ನೆಲ್ಲಾ ಸೇರಿಸಿ ಒಣಗಿದ ಮತ್ತು ಒಣಗುತ್ತಿರುವ ಎಲೆಗಳಿಂದ ಇವುಗಳನ್ನು ಬಿಗಿಯಾಗಿ ಸುತ್ತುವುದರಿಂದ ಕಬ್ಬುಗಳು ಸುಲಭವಾಗಿ ಕೆಳಗೆ ಬಿದ್ದು ಮುರಿಯುವುದಿಲ್ಲ. ಹೀಗೆ ಮಾಡುವುದರಿಂದ ಸರಿಗಳ ಹಾವಳಿ ಕಡಿಮೆಯಾಗುತ್ತೆಂಬ ನಂಬಿಕೆಯೂ ಕೆಲವು ಕಡೆ ಇದೆ. ಚೇಣಿ ಕಬ್ಬನ್ನು ಸುತ್ತುವ ಪದ್ಧತಿ ಇರುವುದಿಲ್ಲ. ಎರಡು ಮೂರುಸಲ ಸುತ್ತುವ ಪದ್ಧತಿಯುಂಟು. ಹೀಗೆ ಸುತ್ತುವುದಕ್ಕೆ ಸುಮಾರು ಎಕರೆ ಒಂದಕ್ಕೆ ೪೦ ರೂಪಾಯಿ ವೆಚ್ಚವಾಗುತ್ತದೆ. ಈ ಕೆಲಸದಿಂದ ಗುಣವೇನಾದರೂ ಉಂಟೆ ಎಂಬುದನ್ನು ಪರೀಕ್ಷೆಮಾಡಿ ನೋಡಲು, ಕೆಳಗೆ ತೋರಿಸಿರುವ ಫಲಿತಾಂಶವು ಕಂಡುಬಂದಿರುವುದು :—

ಎಕರೆಗೆ ಬರುವ

	ಕಬ್ಬಿನ ಸಂಖ್ಯೆ		ಒಟ್ಟು ತೂಕ
ಎರಡಡಿ ಸಾಲು—ಸುತ್ತಿದ್ದು	.. 22,792	..	46¼ ಟನ್
ಸುತ್ತದ್ದು	.. 20,095	..	40½ ,,
ಮೂರಡಿ ಸಾಲು—ಸುತ್ತಿದ್ದು	.. 20,740	..	52¼ ,,
ಸುತ್ತದ್ದು	.. 18,849	..	46⅛ ,,
ನಾಲ್ಕಡಿ ಸಾಲು—ಸುತ್ತಿದ್ದು	.. 19,043	..	49½ ,,
ಸುತ್ತದ್ದು	.. 17,261	..	44¼ ,,

ಇದರಿಂದ ಸುತ್ತುವುದರಿಂದ ಸಪ್ಪನೇನೂ ಇಲ್ಲ, ಸ್ವಲ್ಪ ಆದಾಯವೂ ಆಗಬಹುದೆಂದು ತೋರಿಬರುತ್ತದೆ. ಆದ್ದರಿಂದ ಸಾಧ್ಯವಾದಲ್ಲಿ ಕಬ್ಬನ್ನು ಸುತ್ತುವುದೇ ಉತ್ತಮವೆಂದು ಹೇಳಬಹುದು. ಹೀಗೆ ಮಾಡುವುದರಿಂದ ಹೆಚ್ಚಾಗಿ ಆದಾಯ ಬರದಿದ್ದಾಗ್ಯೂ, ಜಮಾನು ಜೊಕ್ಕಟವಾಗಿರುತ್ತದೆ. ನೀರು ಹಾಯಿಸುವುದಕ್ಕೂ ಮತ್ತು ಇತರೆ ಕೆಲಸಗಳಿಗೂ ಜಮೀನಿನೊಳಕ್ಕೆ ಪ್ರವೇಶಿಸುವುದಕ್ಕೆ ಸುಲಭವಾಗಿರುತ್ತದೆ ಮತ್ತು ಹೆಗ್ಗಣ, ಸರಿ, ಮೊಲ ಮುಂತಾದವುಗಳು ಕಬ್ಬಿನಲ್ಲಿ ಅವಿತುಕೊಂಡಿರುವುದಕ್ಕೆ ಅವಕಾಶವಿರುವುದಿಲ್ಲ. ಹೆಚ್ಚಾಗಿ ಕಬ್ಬಿನ ಬೆಳೆಮಾಡುವವರಿಗೆ ಸಾಕಾದಷ್ಟು ಕೂಲಿಗಳು ಸಿಕ್ಕದೆ ಇರುವ ಸಂಭವದಲ್ಲಿ ಒಂದುಸಲವಾದರೂ ಸುತ್ತಿ, ಕೆಳಗೆ ಬಿದ್ದಿರುವ ಒಣ ಎಲೆಗಳನ್ನು ಆಗಾಗ್ಗೆ ಎತ್ತಿಹಾಕಿ ಭೂಮಿಯನ್ನು ಜೊಕ್ಕಟವಾಗಿ ಇಟ್ಟುಕೊಳ್ಳುವುದು ಒಳ್ಳೆಯದಾಗಿ ಕಾಣುತ್ತದೆ.

ಪರಿವರ್ತನೆ

ಕಬ್ಬು ಬೆಳೆಯುವ ಭೂಮಿಗಳಲ್ಲಿ ಬಾಗು ಸಿಲ್ಲದಂತೆ ಕಾಲುವೆಗಳನ್ನು ತೋಡಿರುತ್ತದೆಯಾದ್ದರಿಂದ, ಇಂಥಾ ಜಮೀನುಗಳಲ್ಲಿ ಭತ್ತವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಭತ್ತವನ್ನು ಬೆಳೆಯುವುದಕ್ಕೆ ಅನುಕೂಲವಾದ ಭೂಮಿಗಳಲ್ಲಿ, ಕಬ್ಬನ್ನು ಬೆಳೆದರೆ, ತಂಪು ಹೆಚ್ಚಾದ್ದರಿಂದ ಒಳ್ಳೆ ಬೆಳೆ ಬರುವುದಿಲ್ಲ. ಆದ್ದರಿಂದ ಒಂದೇ ಭೂಮಿಯಲ್ಲಿ ಇನೇರಡನ್ನು ಪರಿವರ್ತಿಸಿ ಬೆಳೆಯುವುದಕ್ಕೆ ಆಗುವುದಿಲ್ಲ. ಕಬ್ಬಿನ ಜಾತಿಯಲ್ಲಿ ಪರಿವರ್ತಿಸಬೇಕಾದರೆ ಅದರ ಹಾಗೆಯೇ ಬೆಳೆಯತಕ್ಕ ಅದಕ್ಕೆ ಬೇಕಾದ ಸಲಕರಣೆಗಳನ್ನೇ ಅಪೇಕ್ಷಿಸುವಂತಹ ತೋಟದ ಪೈರುಗಳನ್ನು ಬೆಳೆಯಬಹುದು. ಉದಾಹರಣೆಗೆ ಹೆಚ್ಚಾಳದ ಕ್ಷೇತ್ರದಲ್ಲಿ ಒಂದು ವರ್ಷ ಕಬ್ಬು, ಇದಾದನಂತರ ಮತ್ತೊಂದು ವರ್ಷ ತಿಂಗಳವರೆ, ಮುಸಕಿನಜೋಳ, ಅಲಸಂದೆ ಇವುಗಳನ್ನು ಒಂದಾದನೇಲೊಂದನ್ನು ಬೆಳೆದದ್ದರಿಂದ ಲಾಭಕರವಾಗಿ ಫಲಿಸಿದೆ. ಕೊನೆಗೆ ಬೆಳೆದ ಅಲಸಂದೆಯನ್ನು ಹೂಬಿಡುವ ಕಾಲದಲ್ಲಿ ಕುಯಿದು ಹಸುರು ಗೊಬ್ಬರವಾಗಿ ಭೂಮಿಯಲ್ಲಿ ಉತ್ತುಬಿಟ್ಟು ಮೂರನೆ ವರ್ಷ ಪುನಃ ಕಬ್ಬನ್ನು ಬೆಳೆಯುವ ಪದ್ಧತಿಯು ಒಳ್ಳೆಯದೆಂದು ಕಂಡುಬಂದಿದೆ.

ರೇಪೆ ಮಾಡುವುದು

ಸಾಧಾರಣವಾಗಿ ಕಬ್ಬನ್ನು ಹನ್ನೆರಡು ತಿಂಗಳಾದನಂತರ ಕಟಾವುಮಾಡುತ್ತಾರೆ. ಕಬ್ಬನ್ನು ಗಾಣವಾಡಲು ಉಕ್ಕಿನ ಗಾಣಗಳನ್ನು ಈಗ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲಿಯೂ ಉಪಯೋಗಿಸುತ್ತಾರೆ. ಎಲ್ಲಾ ವಿಧವಾದ ಗಾಣಗಳನ್ನೂ ಪರೀಕ್ಷಿಸಿ, ನಮ್ಮ ಇಲಾಖೆಯವರು ನಾಪನ್ ಗಾಣವೇ ಉತ್ತಮ

ವೆಂದು ತೀರ್ಮಾನಿಸಿರುತ್ತಾರೆ. ಇದರಲ್ಲಿ ಸಾಧಾರಣವಾಗಿ ಶೇಕಡಾ ೬೫ಕ್ಕೆ ಕಡಿಮೆ ಇಲ್ಲದೆ ಹಾಲು ಇಳಿಯುತ್ತದೆ. ಈಚೆಗೆ ಬೆಂಗಳೂರಲ್ಲಿ ಮಧುರೆ ಗಾಣವೆಂಬುದು ತಯಾರಾಗುತ್ತಿದೆ. ಪರೀಕ್ಷಿಸಿ ನೋಡಿದ್ದರಲ್ಲಿ ಇದೂ ಬಹಳ ಒಳ್ಳೆಯದೆಂದು ಕಂಡುಬಂದಿದೆ. ಅನೇಕವಾಗಿ ವಿಧ ವಿಧವಾದ ಹೊಸ ಗಾಣಗಳು ಬಂದಿರುತ್ತವೆ. ಈ ಗಾಣಗಳನ್ನು ಕೊಂಡುಕೊಳ್ಳುವ ಮುಂಚೆ ತಿಳಿದವರಲ್ಲಿ ಆಲೋಚನೆ ಮಾಡುವುದು ಉತ್ತಮ. ಹೆಚ್ಚಾಗಿ ಕಬ್ಬು ಬೆಳೆಯುವವರು ಯಂತ್ರದಿಂದ ನಡೆಸುವ ಗಾಣಗಳನ್ನು ಇಟ್ಟುಕೊಂಡಿರುತ್ತಾರೆ. ಇಂಥಾ ಗಾಣಗಳನ್ನು ವಿದ್ಯುಚ್ಛಕ್ತಿಯಿಂದ ನಡೆಸುವುದೂ ಕೂಡ ವಾಡಿಕೆಗೆ ಬಂದಿರುತ್ತದೆ. ಹೀಗೆ ಗಾಣಗಳಿಂದ ಬಂದ ಕಬ್ಬಿನ ಹಾಲನ್ನು ಕೊಪ್ಪರಿಗೆಗಳಲ್ಲಿ ಕಾಯಿಸಿ ಬೆಲ್ಲವನ್ನು ಮಾಡಿ ತಕ್ಕಣನೇ ವ್ಯಾಪಾರಮಾಡುವುದು ಸಾಮಾನ್ಯವಾಗಿ ರೂಢಿಯಲ್ಲಿದೆ. ಕೆಲವು ಕಡೆ ಕಬ್ಬನ್ನೆಲ್ಲಾ ಗುತ್ತಿಗೆಗೆ ಕೊಡುವ ಪದ್ಧತಿಯುಂಟು. ಇನ್ನು ಕೆಲವು ಕಡೆ ಕಬ್ಬನ್ನು ಕ್ರಯಕ್ಕೆ ಕೊಡದೆ, ಅದನ್ನು ಗಾಣವಾಡಿ ಬೆಲ್ಲವನ್ನು ಮಾಡಿಕೊಡುವುದನ್ನು ಮಾತ್ರ ಗುತ್ತಿಗೆಗೆ ಕೊಡುತ್ತಾರೆ. ಇದರಲ್ಲಿಯೂ ಬೇರೆ ಬೇರೆ ಕಡೆ ಬೇರೆ ಬೇರೆ ವಾಡಿಕೆಯುಂಟು. ಬೆಲ್ಲ ಮಾಡುವ ಒಲೆಗಳ ವಿಷಯದಲ್ಲಿ ಅನೇಕ ಪರೀಕ್ಷೆಗಳನ್ನು ಮಾಡಿ ಸುಲಭೋಪಾಯದಲ್ಲಿ ಕಟ್ಟಿಗೆ ಖರ್ಚು ಏನೂ ಇಲ್ಲದೆ ಕೆಲಸ ಮಾಡುವುದಕ್ಕೆ ಆಗುವಂತಹ ಒಲೆ ಒಂದನ್ನು ಹೆಬ್ಬಾಳದಲ್ಲಿ ಕಟ್ಟಿರುತ್ತೆ. ಇದರ ವಿಷಯವಾಗಿ ೧೯೩೬ನೇ ಇಸವಿಯ ವ್ಯವಸಾಯದ ಪಂಚಾಂಗದಲ್ಲಿ ಒಂದು ಲೇಖನವಿದೆ. ಇದರ ನಮೂನೆಯಲ್ಲಿ ಅನೇಕ ಸ್ಥಳಗಳಲ್ಲಿ ಒಲೆಗಳನ್ನು ಕಟ್ಟಿ ತ್ಯಸ್ತರಾಗಿರುತ್ತಾರೆ. ಈ ಒಲೆಯು ಸ್ವಲ್ಪ ಕಬ್ಬು ಬೆಳೆಯುವವರಿಗೆ ಅನುಕೂಲವಾದದ್ದು. ಹೆಚ್ಚಾಗಿ ಕಬ್ಬು ಬೆಳೆದು ಯಂತ್ರ ಸಹಾಯದಿಂದ ಕಬ್ಬಿನ ಹಾಲು ಆರೆಯುವವರಿಗೋಸ್ಕರ ದೊಡ್ಡ ದೊಡ್ಡ ಒಲೆಗಳನ್ನು ಹೆಬ್ಬಾಳದಲ್ಲಿಯೂ ಬಿಜ್ಜೂರಿನಲ್ಲಿಯೂ ಕಟ್ಟಿರುತ್ತೆ. ದೊಡ್ಡ ದೊಡ್ಡ ಪಟ್ಟಣಗಳ ಹತ್ತಿರ ಕಬ್ಬು ಬೆಳೆಯುವವರಿಗೆ ಬೆಲ್ಲ ಮಾಡುವ ಯೋಚನೆಯೇ ಬೇಕಾಗಿರುವುದಿಲ್ಲ. ಈ ಕಬ್ಬೆಲ್ಲಾ ತಿನ್ನುವುದಕ್ಕೇ ವ್ಯಾಪಾರವಾಗಿ ಹೋಗುತ್ತದೆ. ಇದೆಲ್ಲಾ ಪರ್ಯಾಲೋಚಿಸಿ ನೋಡಿದರೆ ಕಂಡುಬರುವುದೇನೆಂದರೆ, ಕಬ್ಬು ಬಹಳ ವೆಚ್ಚವಿಡಬೇಕಾದ ಪೈರು. ಇದಕ್ಕೆ ಖರ್ಚು ಹೆಚ್ಚಾಗಿ ಇಟ್ಟಹಾಗೂ, ಗೊಬ್ಬರವನ್ನು ಮಿತಿಮೀರದೆ ಹೆಚ್ಚಾಗಿ ಹಾಕಿದಹಾಗೂ ಹೆಚ್ಚಾದ ಆದಾಯವನ್ನು ದೊರೆಯುತ್ತದೆ. ನಮ್ಮ ಸೀಮೆಯಲ್ಲಿ ನೀರಿನ ಅನುಕೂಲತೆಯು ಹೆಚ್ಚಿದಹಾಗೆಲ್ಲಾ ಕಬ್ಬಿನ ಪೈರೂ ವೃದ್ಧಿಯಾಗಿ ನಮ್ಮ ಸೀಮೆಗೆಲ್ಲಾ ಬೇಕಾಗಿರುವ ಬೆಲ್ಲ ಸಕ್ಕರೆಗಳು ಇಲ್ಲಿಯೇ ತಯಾರಾಗುವುದಲ್ಲದೆ, ಮಿಕ್ಕದ್ದನ್ನು ಹೊರಕ್ಕೆ ರಫ್ತುಮಾಡುವ ಸಂಭವವೂ ದೊರೆಯಬಹುದು. ಪ್ರಪಂಚದಲ್ಲೆಲ್ಲಾ ಉತ್ಕೃಷ್ಟವಾದ ಕಬ್ಬುಗಳು ನಮ್ಮ ಮೈಸೂರು ಸೀಮೆಯಲ್ಲಿ ಬೆಳೆಯುತ್ತವೆ ಎಂಬುದು ಪ್ರಖ್ಯಾತವಾದ ವಿಷಯ. ಹೀಗಿರುವಲ್ಲಿ ಈ ದೇಶದಲ್ಲಿ ಅತ್ಯುತ್ತಮವಾದ ಕಬ್ಬಿನ ಪೈರನ್ನು ನಮ್ಮ ರೈತರು ಬೆಳೆಯುವುದಕ್ಕೆ ಶಕ್ತರೆಂದು ಹೇಳಲು ಸಂದೇಹವಿಲ್ಲ.

ವ್ಯವಸಾಯದ ಹಾಡುಗಳು

ಮ॥ ಎಚ್. ನಾರಾಯಣರಾವ್, ಬಿ.ಎ. ಅವರಿಂದ
(ಪುಟ ೨೧೨ ರಿಂದ ಮುಂದುವರಿದದ್ದು.)

೩. ಬಿತ್ತನೆಯ ಚುನಾವಣೆ

ಬೀಜದ ಕಾಳನ್ನಾರಿಸಿರಿ
ರಾಜಿಪ ಬೆಳೆಯನು ರೂಢಿಸಿರಿ॥
ಬೀಜದಂತೆ ಬೆಳೆಯಾಗುವದು
ಬೀಜದೊಳೆಲ್ಲವು ಅಡಗಿಹುದು ॥
ಕೊಡದಿರೆ ಬೀಜಕೆ ಗಮನವನು
ಬಿಡುವದು ಸುಭಿಕ್ಷದಾಶೆಯನು॥
ಬೆಳೆಯನು ಕೊಯ್ಯುವದಕೆ ಮುನ್ನ
ನಲಿಯುತೆ ದೇವರ ಮಾಡಣ್ಣ ॥
ದೇವರಿಗೊಪ್ಪಿಸೆ ವಿಾಸಲನು
ಭಾವಿಸುತಾರಿಸಿ ತೆನೆಗಳನು॥
ತೆನೆಗಳನಾರಿಸಲಿಕೆ ಬೇಕು
ಅನುಭವವೆಚ್ಚರ ಕೈಚುರುಕು॥
ಹುಳಗಳ ಸುಳಿವಿಲ್ಲದುದಾಗಿ
ಬಲಿತಿರಬೇಕವು ಚೆನ್ನಾಗಿ॥
ಮಾಗಿ ಸುದೃಢವಾಗಿರಬೇಕು
ರೋಗರಹಿತವಾಗಿರಬೇಕು॥
ಆರಿಸಿ ತೆಗೆದಾ ತೆನೆಗಳನು
ಸೇರಿಸಿ ಮಾಡಿರಿ ವಿಾಸಲನು॥
ವಿಾಸಲ ದೇವರಿಗೊಪ್ಪಿಸಿರಿ
ಸೂಸುವ ಬೆಳೆಯನು ಪ್ರಾರ್ಥಿಸಿರಿ॥
ವಿಾಸಲ ತೆನೆಗಿನ್ನಾವುದನು
ಲೇಶವು ಬೆರೆಸದೊಲಿಡಿರದನು॥
ಮುಂದಿನ ಬೆಳೆಗದ ಬೀಜಕ್ಕೆ
ಹೊಂದಿಸಿ ಹಾಕಿ ಶುಭೋದಯಕೆ॥
ಉತ್ತಮವಿದು ಮೇಣ್ ಸುಲಭ ವಿುಗೆ
ಮತ್ತೊಂದಿಹುದಾರಿಸುವ ಬಗೆ॥

ಉದಕದೊಳುಪ್ಪನು ನೆರೆ ಹಾಕಿ
ಅದರಲಿ ಕಾಳುಗಳನು ಹಾಕಿ॥
ಜೊಳ್ಳು ಕಾಳುಗಳು ತೇಲುವವು
ಒಳ್ಳೆಯವೆಲ್ಲಾ, ಮುಳುಗುವವು॥
ತೇಲುವ ಜೊಳ್ಳನು ಬಿತ್ತ್ತಲದು
ಕಾಳನು ಕೊಡಲಾರದು ಬೆಳೆದು॥
ಮುಳುಗಿದವನು ತೆಗೆದೊಣಗಿಸಿರಿ
ಬೆಳೆಗದ ಬಿಡದುಪಯೋಗಿಸಿರಿ॥
ಮೈಲತುತ್ತ್ತ ಕದಡಿದ ಜಲದಿ
ಜೋಳದ ಬೀಜಗಳನ್ನದ್ದಿ॥
ಬಳಿಕದನೊಳ್ಳೆಯ ನೀರಿನೊಳು
ತೊಳೆದು ನೆರಳಿನೊಳೊಣಗಿಸಲು॥
ಕಾಡಿಗೆ ರೋಗದ ಶೆಲೆಯಿರದು
ಮಾಡಿದ ಬೆಳೆ ಕೈಸೇರುವದು॥
ಬೀಜಕ್ಕದನೇ ಇಡಿರಣ್ಣ
ರಾಜಿಪ ಬೆಳೆಯಾಗುವದಣ್ಣ॥
ಹೀಗೆಯೆ ಕಬ್ಬಿನ ಬೀಜಕ್ಕು
ರಾಗದಿ ಮಾಡಲು ಫಲವಕ್ಕು॥
ಕಾಡಿಗೆ ರೋಗವು ಬರದಂತೆ
ಮಾಡಿದ ಬೆಳೆಗಾಗದು ಕೊರತೆ॥
ಎಲ್ಲ ಬೆಳೆಗು ಬೀಜವೆ ಮೂಲ
ಒಳ್ಳೆಯ ಬೀಜವೆ ಜೀವಾಳ॥
ಯಾವದನಾದರು ಮಾಡಣ್ಣ
ಜೀವಾಳವ ನೀ ಹಿಡಿಯಣ್ಣ॥

೪. ಗೊಬ್ಬರ

ಜನನಿಯ ಮರುಕವದೆಷ್ಟಿಹುದೆಂಬುದ ಬಲ್ಲವರಿಲ್ಲೀ ಭುವಿಯೊಳಗೆ
ಜನರಾರೋಗ್ಯಕೆ ಶತ್ರುಪ್ರಾಯದ ಕಸವಹುದಮೃತವು ಮಾನ್ಯಳಿಗೆ ॥
ಅಸಹ್ಯವಾದುದನೆಲ್ಲ ಪದಾರ್ಥವನಾದರದಿಂದಲಿ ಸ್ವೀಕರಿಸಿ
ಋಷಿಯಿಂ ಶುದ್ಧಿಯಗೈಯುತೆ ಮಾತಾಯ್ ಬೆಳೆಗದನುಣಿಪಳು ಸವಿಗೊಳಿಸಿ ॥
ಗೊಬ್ಬರವೆಂಬುದು ಚೆಂದದಿ ತಿಳಿಯಿರಿ ಭೂಮಿಗೆ ಸವಿಯಾದಾಹಾರ
ಗೊಬ್ಬರವಿಲ್ಲದೆ ಬೆಳೆದರೆ ಭೂಮಿಯು ಶೀಘ್ರದೊಳವ್ವದು ನಿಸ್ಸಾರ॥

ಎರಡು ವರ್ಗಗಳು ಸಸ್ಯ ಖನಿಜಗಳು ಇರುವವು ಬೆಳೆಯಾಹಾರದೊಳು
ಭರದಿಂದೆಲ್ಲವ ಗಾಳಿ ನೀರುಗಳ ಮೂಲಕ ಕೊಳ್ವವು ಪೈರುಗಳು ॥

ಬೂದಿಯೊಳಿರುವವು ಖನಿಜ ವಸ್ತುಗಳು; ಸೇರುತ ನೀರೊಳಗವು ಕರಗಿ
ಕೂದಲಿನಂತಹ ಉಪಬೇರುಗಳಿಂ ಪೈರಿಗೆ ಸೇರ್ವವು ವಿಗಿಲಾಗಿ ॥

ಎಲೆಗಳ ದನಗಳ ಗೊಬ್ಬರಗಳು ಸಹ ಗಿಡಗಳ ಮರಿಬೇರ್ಗಳ ದ್ವಾರ
ಜಲದೊಳಗೆರಡೂ ವರ್ಗದ ತಿಂಡಿಯು ಕರಗಿಸಿ ಕುಡಿಪವು ತಿಳಿನೀರ ॥

ಭೂಮಿಯ ಕಣಗಳ ರೂಪಾಂತರವನೆ ಕರೆವೆವು ನಾವದ ಬೆಳೆಯೆಂದು
ಭೂಮಿಯೊಳಾಯಿತು ಬೆಳೆಯೆಂದರೆ ದಿಟ ಅಷ್ಟರ ನಷ್ಟವು ನೆಲಕೆಂದು ॥

ಸಷ್ಟವನಾಯಾ ಕೂಡಲೆ ತಪ್ಪದೆ ಕೊಟ್ಟರೆ ಪದವನು ನೆರೆ ತಿಳಿದು
ಪುಷ್ಟಿಯು ದೆಸೆಯಿಂದೆರಡನೆ ಬೆಳೆಯನು ಪಿಂಗದೆ ಕೂಡುವದು ಭೂಮಿಯದು ॥

ಸಷ್ಟವನಾಯಾ ಕೂಡಲೆ ಕೂಡಿಸಿ ಕೊಡದಿರೆ ಪದವನು ನೆರೆ ತಿಳಿದು
ಪುಷ್ಟಿಯು ಸಾಲದೆ ಬೆಳೆ ಸರಿಯಾಗದೆ ಬೇಡೆನಿಸುವದಾ ಭೂಮಿಯದು ॥

ಫಸಲಿನ ರೂಪದಿ ಭೂಮಿಗೆ ನಷ್ಟವು ಸಂಭವಿಸುವ ಕಾರಣದಿಂದ
ಫಸಲಿನ ರೂಪದ ಗೊಬ್ಬರವನ್ನೇ ಪಾಕುವದುತ್ತಮ ಫಲಪ್ರದ ॥

ಫಸಲಿನ ರೂಪದ ಗೊಬ್ಬರವೆಂದರೆ ತಡಗಣಿ ಸಣಬೇ ಮೊದಲಾದ
ಫಸಲನು ಬೆಳೆದದು ಹಸುರಿರುವಾಗಲೆ ಉಳುವದು ಕಾಳನಪೇಕ್ಷಿಸದೆ ॥

ಫಸಲಿನ ಸಾರವು ಸಸ್ಯಾಹಾರಿಗಳುದರದಿ ಪೂರ್ಣಜೀರ್ಣದಿಂದ
ಪಶುಗಳ ಗೊಬ್ಬರದಂಥಾ ಫಲಕರ ಗೊಬ್ಬರವಿಲ್ಲವು ಮತ್ತೊಂದು ॥

ಪಶುಗಳ ಗೊಬ್ಬರವೆಂದನ ತುಚ್ಛೀಕರಿಸದೆ ರಕ್ಷಿಸುತಿರಬೇಕು
ಫಸಲಿನ ಜೀವಸ ಸಾರವು ಹೋಗದ ಬಗೆಯಲಿ ನೋಡುತಲಿರಬೇಕು ॥

ಮಟ್ಟದ ಗುಂಟಿಯ ಪಾದರಿಯಾಗಿಯೆ ತೋಡಿಸಿ ಐದಾರಡಿಯಾಳ
ಕಟ್ಟಿಸಿ ಕಲ್ಲಿಂದೆಲ್ಲಾ ಪಕ್ಕವ ಪಾಕಿಸಿ ತಳಕುಂ ಕಲ್ಲುಗಳ ॥

ಒಂದರ ಮೇಲೊಂದೊರಸೆಯ ಸಮ್ಮನೆ ಸೇರಿಸಿ ಸಂದನು ಬಿಡದಂತೆ
ಹೊಂದಿಸಿ ಮೇಲ್ಗಡೆಯಲಿ ಹೊಸ ಮಣ್ಣನು ತೆಳ್ಳಗೆ ಹರಡಲು ನಿಶ್ಚಿಂತೆ ॥

ಬಸಿಲೊಳಗೊಣಗುತ, ಮಳೆಯಲಿ ನೆನೆಯುತ, ಗಾಳಿಯೊಳಾರುತ, ಬೆಂಪಾದ
ಕಸದಲಿ ಗುಣವಿನಿತಿಲ್ಲವು ತಿಳಿಯಿರಿ; ಇದ್ದರೆ ಕೆಡುಕಿಹುದದರಿಂದ ॥

ಮಳೆಯೇ ಮೊದಲಾದಾಧಿಗಳಿಂದಲಿ ಸಾರವು ಹೋಗದ ರೀತಿಯಲಿ
ಗುಳಿಗಳ ಮೇಲ್ಗಡೆ ಚಪ್ಪರವನು ನೆರೆ ಹಾಕಿಸಬೇಕಾವಕ್ಕಿಯಲಿ ॥

ಗೊಬ್ಬರದಲ್ಲಿನ ಸಸ್ಯಪದಾರ್ಥಗಳೈದುತ ನೆರೆ ರೂಪಾಂತರವ
ತಬ್ಬಿದ ಖನಿಜಕ್ಕಾಗಲು ಬಿಡುಗಡೆ ಕೊಳೆಯುತೆಂಬೀವಾ ಗೊಬ್ಬರವ ॥

ಜಲಾಂಶ ಹೆಚ್ಚಲು ಲೋಪದ್ರವ್ಯವು ನೀರೊಳು ಕರಗುತ ವಿಗಿಲಾಗಿ
ಗುಳಿಯಿಂದಾಚೆಗೆ ಕೊಚ್ಚಿ ಹರಿಯುತಲಿ ಪೋಪುದು ಕಪ್ಪನೆ ನೀರಾಗಿ ॥

ಜಲಾಂಶ ಸಾಲದೆ ಗೊಬ್ಬರವೊಣಗಲು ಹುಟ್ಟಿದ ಶಾಖದ ಕಡುಭರದಿ
ತಳೆಯುತ ಗಾಳಿಯ ರೂಪವನೊನೆಯು ವಸ್ತುವು ಹಾರುವದಾಗಸದಿ ॥

ನೀರಲಿ ಕರಗುತ ಹರಿಯಲಮೋನಿಯ ಭೂಮಿಗೆ ನಷ್ಟವದಷ್ಟಿಲ್ಲ
ಸೇರಿಸಿದೊಡೆಯನಿಗಿಲ್ಲದೆ ಹೋದರು ಸೇರುವದನ್ಯರಿಗದರ ಫಲ ॥

ಮಾರುತ ರೂಪದಿ ಹಾರಲಮೋನಿಯ ತಿಳಿಯಿರಿ ಫಲವಿನಿತಿಲ್ಲೆಂದು
ಸಾರವದೊಣಗಲು ಬಿಡುವದಕಿಂತಲು ನೀರನು ಕೊಡುವದು ಮೇಲಿಹುದು ॥

ಕರಗಿದಮೋನಿಯಮಿರದೋಡದ ಪರಿ ಹೆಚ್ಚಿಗೆ ನೀರನು ಕೊಡದಂತೆ
ಪರಿಕಿಸಿ ಹದವನು ಕಾಯ್ದಿಟ್ಟಿರೆ ಸಲೆ ಫಲವೀವುದು ಮನವೊಲಿವಂತೆ ॥

ಆರೈದಿಟ್ಟಿರಲಾರದು ಕೊಟ್ಟುದನಾತುರವಿದ್ದರು ಮಳಲ ನೆಲ
ವೂರಾ ಮಾಗಿಸಿ ಸಿದ್ಧತೆಗೊಳಿಸಿದ ಗೊಬ್ಬರವದಕಿಡಲಹುದು ಫಲ ॥

ಕೆಚ್ಚೆಯ ನೆಲದೊಳು ತಾಣವಿಹುದರಿಂದಂತಹ ಭೂಮಿಗೆ ಸರಿಯಾದ
ಗೊಬ್ಬರವರೆನಾಗಹುದನು ಕೊಟ್ಟರೆ ಹೆಚ್ಚಿನ ಫಲವಹುದದರಿಂದ ॥

ಅರೆವಾಗದ ಗೊಬ್ಬರವನು ತಿಳಿಯದೆ ಮಳಲಿಗೆ ಪಾಕಲಮೋನಿಯವು
ಉರಿಯುವ ಶಾಖಕ್ಕಾರಿಯೋಗುವದು; ಕಷ್ಟಕೆ ಪ್ರತಿಫಲ ನಿಷ್ಫಲವು ॥

ಕೊಳೆಯದೆ ಇರುತಿಪ ಹೊಸ ಗೊಬ್ಬರವನು ಕೆಚ್ಚೆಯ ಭೂಮಿಗೆ ಕೊಡಲಾಗ
ನೆಲದೊಳು ಸೇರ್ದದು ಕೊಳೆಯುವ ಮೂಲಕ ನೆಲವನು ಮಾಳ್ಪುದು ಹಸನಾಗಿ ॥

ಸಗಣಿಯ ಸುಟ್ಟರೆ ಖನಿಜ ದ್ರವ್ಯವು ಪಾತ್ರವೆ ಬೂದಿಯೊಳುಳಿಯುವದು
ವಿಗಿಲಿನ ಸಸ್ಯಪದಾರ್ಥವು ಸರ್ವವು ಹೊಗೆ ಗಾಳಿಗಳಾಗಳಿಯುವದು ॥

ಗಾಳಿಯೊಳಿಹ ಜಲಜನಕವು ಸಾರಜನಕವಿಂಗಾಲಾವ್ಲ
ಮೇಲಾವ್ಲಜನಕವೆಂಬೀ ನಾಲಕು ಸಸ್ಯದ ಮೂಲೌಧಾರವಲ ॥

ಸಸ್ಯದ ಮೂಲದ್ರವ್ಯಗಳೆನಿಸುತೆ ಗಾಳಿಯೊಳಿರುವನು
ಸಸ್ಯವು ಕೊಳ್ವುದು ಸೂಕ್ಷ್ಮದೊಳೆಲೆಗಳ ಮೂಲಕವಿರದವನು ॥

ಗಾಳಿಯೊಳೊದಗುವ ಸಸ್ಯಾಹಾರವು ಸಾಲದುದೆಂಬುದು ಖಂಡಿತವು
ಜ್ವಾಲೆಗೆ ಕೊಡದಂತಿರುವ ಸಗಣಿಯನು ಕಾಪಿಡುವದು ಫಲದಾಯಕವು ॥

ಸಗಣಿಯ ಗೊಬ್ಬರಕಿಂತಲು ವಿಗಿಲಿನ ಗೊಬ್ಬರವೆನಿಪುದು ಗೋಮೂತ್ರ
ಬಗೆದದ ಕಳೆಯದೆ ಕೂಡಿಸಿ ಬಳಸುವ ಪದ್ಧತಿ ಪಾಶ್ಯವು ಸರ್ವತ್ರ ॥

ಇತರ ಪತ್ರಿಕೆಗಳಿಂದ

ಬೀರೂರಿನ ಸಮೀಪದ ಪಶುಪಾಲನಾ ಕ್ಷೇತ್ರ

೧೯೨೭-೨೮ನೇ ಇಸವಿಯ ಅಮೃತಮಹಲ್ ಇಲಾಖೆಯ ವರದಿಯ ಉಪೋದ್ಘಾತದಲ್ಲಿ ಸರ್ಕಾರದವರು ವ್ಯವಸಾಯದ ಡೈರೆಕ್ಟರವರ ಅಭಿಮತದಂತೆ ಜನಗಳಿಗೆ ಒಳ್ಳೆಯ ರಾಸುಗಳನ್ನು ಒದಗಿಸುವುದು ಸಾಧ್ಯವಾಗಬೇಕಾದರೆ ಇಲಾಖೆಯವರು ಒಂದೆರಡು ಪಶುಪಾಲನಾಕ್ಷೇತ್ರಗಳನ್ನು ಶಾಸ್ತ್ರೀಯವಾಗಿಯೂ ಸಾಂಗವಾಗಿಯೂ ನಡೆಸಬೇಕಾದುದು ಅವಶ್ಯಕವೆಂದು ಅಭಿಪ್ರಾಯಪಟ್ಟರು. ಅಂತಹ ಕ್ಷೇತ್ರವೊಂದನ್ನು ಬೀರೂರಿನ ಸಮೀಪದಲ್ಲಿ ಪ್ರಾರಂಭಿಸುವುದಕ್ಕೆ ಡೈರೆಕ್ಟರವರು ಈಗ ಸಲಹೆಯನ್ನು ಕೊಟ್ಟಿದ್ದಾರೆ. ಈ ಸ್ಥಳವನ್ನು ಆರಿಸುವುದಕ್ಕೆ ಮುಖ್ಯ ಕಾರಣಗಳ್ಯಾವುವೆಂದರೆ:—ಅಮೃತಮಹಲ್ ಇಲಾಖೆಯ ಅತ್ಯುತ್ತಮವಾದ ರಾಸುಗಳು ಆ ಪ್ರಾಂತ್ಯದಲ್ಲಿರುವುದೊಂದು; ಪ್ರಾಣಿಗಳ ಉಸ್ತುವಾರಿಕೆಗೆ ಮತ್ತು ಮೈಕಟ್ಟಿಗೆ ಬೇಕಾದ ಸಣ್ಣವು ಆ ಪ್ರಾಂತ್ಯದ ಮಣ್ಣುಗಳಲ್ಲಿ ಸಮೃದ್ಧಿಯಾಗಿರುವುದು ಮತ್ತೊಂದು. ಉತ್ತಮವಾದ ಪ್ರಥಮ ತಳಿ, ಅನುಕೂಲವಾದ ಪ್ರದೇಶ ಈ ಎರಡು ಕಾರಣಗಳಿಂದ ಆ ಪ್ರಾಂತ್ಯಕ್ಕೆ ಪ್ರಾಶಸ್ತ್ಯ. ಅಚ್ಚುಂಪುರಕ್ಕೆ ಒಂದು ಮೈಲಿ ದೂರದಲ್ಲಿರುವ ೬೫೦ ಎಕರೆ ವಿಸ್ತೀರ್ಣದ ಉತ್ತಮವಾದ ಪರ್ವತರಾಯನಕೆರೆ ಕಾವಲನ್ನು ಒಂದು ಮಧ್ಯ ಕ್ಷೇತ್ರವಾಗಿ ಮಾಡಿ ಅಲ್ಲಿ ಗಬ್ಬದ ಹಸುಗಳನ್ನೂ, ಕರುಗಳಿಗೆ ಒಂದು ವರ್ಷ ಪ್ರಾಯವಾಗುವವರೆಗೆ ಈದ ಹಸುಗಳನ್ನೂ ಇಟ್ಟು ರಾಸುಗಳು ಎಳತಾಗಿರುವಾಗ ಸಾಧುಮಾಡಬೇಕೆಂಬುದೂ, ಹಸುಗಳನ್ನು ಹಿಡಿಯುವುದಕ್ಕೆ ಸಾಧ್ಯವಾಗುವ ಹಾಗೆ ಬೆಳಗಿಸಬೇಕೆಂಬುದೂ—ಇವುಗಳೇ ಈ ಏರ್ಪಾಟಿನ ಉದ್ದೇಶ.

ಒಟ್ಟು ವಿಸ್ತೀರ್ಣದಲ್ಲಿ ಸುಮಾರು ೩೦೦ ಎಕರೆಗಳನ್ನು ಮೇವಿನ ಬೆಳೆಗಿಟ್ಟು ಕೊಳ್ಳಲಾಗುವುದು. ಕ್ಷೇತ್ರದಲ್ಲಿ ೬೦೦ ರಾಸುಗಳಿಸ್ಸಿಡುವುದಕ್ಕಾಗಬಹುದು. ಮೇವಿನ ಕ್ಷಾಮ ಬಂದದ್ದಾದರೆ ತಡೆಯುವುದಕ್ಕನುಕೂಲವಾಗಿ ಸಮೀಪದಲ್ಲೆ ದೊಡ್ಡ ಕಾಡುಗಳೂ, ಸುಮಾರು ಹನ್ನೆರಡು ಉತ್ತಮವಾದ ಕಾವಲುಗಳೂ ಇವೆ.

ಡೈರೆಕ್ಟರವರು ಕ್ಷೇತ್ರವನ್ನು ಪ್ರಾರಂಭಿಸುವುದಕ್ಕೆ ತಡವಾಗಬಾರದೆಂದೂ, ಒಂದು ವರ್ಷಕಾಲವನ್ನು ಉಳಿಸಿಕೊಳ್ಳುವುದಕ್ಕೋಸ್ಕರವೂ ೧೦೦–೧೫೦ ಎಕರೆ ನೆಲವನ್ನು ಕಡೇಪಕ್ಷ ೧೯೨೯ನೇ ಜನವರಿ ಸಮಯಕ್ಕಾದರೂ ಉತ್ತುಬಿಡಬೇಕೆಂದೂ ಅಭಿಪ್ರಾಯಪಡುತ್ತಾರೆ. ಕಾರ್ಯಕ್ರಮಗಳನ್ನು ಸಾಂಗವಾಗಿ ಸೂಚಿಸುವುದಕ್ಕೆ ಸ್ವಲ್ಪ ಸಾವಕಾಶವಾಗುವುದೆಂದೂ ಈ ತಕ್ಷಣ ೧೨,೦೦೦ ರೂಪಾಯಿಗಳ ಖರ್ಚಾಗಬೇಕೆಂದೂ, ಅದರಲ್ಲಿ ೬,೦೦೦ ರೂಪಾಯಿಗಳನ್ನು ಎಕರೆಗೆ ೧೫ ರೂಪಾಯಿಗಳಂತೆ ಒಂದು ದೊಡ್ಡ ಮೋಟಾರು ನೇಗಲನ್ನು ಬಾಡಿಗೆಗೆ ತಂದು

ನೆಲವನ್ನು ಉಳುವುದಕ್ಕೆ ಖರ್ಚುಮಾಡಬೇಕೆಂದೂ ಅವರ ಅಭಿಪ್ರಾಯ. ತಕ್ಷಣದ ಖರ್ಚು ಹೀಗಿರುತ್ತದೆ:—

	ರೂ.
ಸಿಬ್ಬಂದಿ ಮೂರು ತಿಂಗಳಿಗೆ	738
ಮೂರು ತಿಂಗಳ ದನಗಳ ಆಹಾರಕ್ಕೆ	650
ಇತರೇ	440
ಮುಟ್ಟುಗಳು	1,000
ಕಟ್ಟಡಗಳು	1,550
ಮೋಟಾರು ನೇಗಲಿನ ಬಾಡಿಗೆ	1,500
ಒಟ್ಟು ..	5,878

ಸದ್ಯಕ್ಕೆ ವ್ಯವಸಾಯದ ಶಾಖೆಗೆ ಮೊತ್ತವಾಗಿ ಕೊಟ್ಟಿರುವ ೧೦,೦೦೦ ರೂಪಾಯಿಗಳೊಳಗೆ ಮೇಲ್ಕಂಡ ಖರ್ಚಿಗೆ ಬೇಕಾದ ಹಣವನ್ನು ಏಸಿಯೋಗಿಸಿ ಕೊಳ್ಳಬಹುದೆಂದು ಡೈರೆಕ್ಟರವರು ಸೂಚಿಸಿರುವರು.

ಸರ್ಕಾರದವರು ಡೈರೆಕ್ಟರವರ ಸಲಹೆಯನ್ನು ಅನುಮೋದಿಸಿ, ೬,೦೦೦ ರೂಪಾಯಿಗಳನ್ನು ಮೇಲ್ಕಂಡಂತೆ ಖರ್ಚುಮಾಡಬಹುದಾಗಿ ಮಂಜುರ್ಮಾಡಿರುತ್ತಾರೆ.

ಕಾರ್ಯಾವಸರದ ದೃಷ್ಟಿಯಿಂದ ಡೈರೆಕ್ಟರವರು ಹಣವನ್ನು ಮೇಲ್ಕಂಡಂತೆ ಇತರ ಕೆಲಸಗಳಿಗೆ ಮುಟ್ಟಿದ್ದ ಹಣದಿಂದ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಒಪ್ಪಿರುತ್ತಾರೆ. ಡೈರೆಕ್ಟರವರು ಕೂಡಲೆ ಕೆಲಸವನ್ನು ಪ್ರಾರಂಭಿಸಿ ಮೂರು ತಿಂಗಳಮೇಲೆ ಆಗಿಸವರೆಗೆ ನಡೆದ ಕೆಲಸದ ವರದಿಯನ್ನೊಪ್ಪಿಸಬೇಕಾಗಿ ಕೋರಿದೆ.

ಪರ್ವತರಾಯನಕೆರೆ ಪಶುಪಾಲನಾ ಕ್ಷೇತ್ರದ ಸಂಪೂರ್ಣ ಕಾರ್ಯಕ್ರಮವನ್ನು ಸಾಧ್ಯವಾದಷ್ಟು ಶೀಘ್ರವಾಗಿ ಸೂಚಿಸಬೇಕಾಗಿಯೂ ಕೋರಿದೆ.

(ಸರ್ಕಾರಿ ಹುಕುಂ ನಂ. ಡಿ. 6050–69–ಎ. ಮತ್ತು ಇ. 131–28–3, 1928 ಡಿಸೆಂಬರು 11.)

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ವ್ಯವಸಾಯ ವಿದ್ಯೆಯ ಏರ್ಪಾಡು

ಸಾಮಾನ್ಯ ಮನುಷ್ಯನೊಬ್ಬನು ತಲೆಯೆತ್ತಿ "ನನಗೂ ವಿದ್ಯೆ ಬೇಕು" ಎಂದು ಎಚ್ಚರಗೊಂಡ ದಿನವು ಚರಿತ್ರಾರ್ಹವಾದ ದಿನವೇ ಸರಿ. ಅಮೇರಿಕದ ಆಂದಿನವರೆಗಿನ ವಿದ್ಯಾಭ್ಯಾಸದ ಏರ್ಪಾಡುಗಳೆಲ್ಲವೂ ಕೇವಲ ಕೆಲವರ, ಸರ್ವಸ್ವಾತಂತ್ರ್ಯವನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದ ಶೀಕಡಾ ೫ ಪಾಲು ಜನರ, ಅವಶ್ಯಕತೆಗಳನ್ನೊದಗಿಸುವುದಕ್ಕೆ ಮಾಡಿದ ಏರ್ಪಾಡು. ಅದರ ತತ್ವವೇ ಬೇರೆ.

ಸಾಮಾನ್ಯ ಮನುಜನು ತನ್ನ ಅವಶ್ಯಕತೆಗಳನ್ನು ಬಾಯಿಬಿಟ್ಟು ಹೇಳಬೇಕಾದರೆ ಬಹುಕಾಲ ಹಿಡಿಯಿತು. ಈಗಲಾದರೋ ವಿದ್ಯೆಯು ಸರ್ವಸಮಾನಾಗಿ

ಎಲ್ಲರಿಗೂ ಬೇಕೇ ಬೇಕೆಂದು ವರಾತಮಾಡುವ ನವಯುಗವೇ ಬಂದಂತಿದೆ. ಹೊಸ ಪ್ರಶ್ನೆಗಳು, ಹೊಸ ಸಮಸ್ಯೆಗಳು ಎದ್ದಿವೆ. ಆದುದರಿಂದ ಈಗಿನ ವಿದ್ಯಾಭ್ಯಾಸ ತತ್ವವು, ವಿದ್ಯಾಭ್ಯಾಸ ಕ್ರಮವು, ಹಿಂದಿನಂತೆ ಮೇಲ್ತರದ ಕಸಬುಗಳೆಂದು ಹೇಳಿಕೊಳ್ಳುವ ಕಸಬುಗಳಿಗೆ ಬೇಕಾದ ಶಿಕ್ಷಣವನ್ನು ಹೊಂದಿಸಿದರೆ ಸಾಲದು. ಇತರ ಸಾಮಾನ್ಯ ಕಸಬುಗಳಿಗೂ ವ್ಯಾಪಾರ ಕೆಲಸಗಳಿಗೂ ಜನಸಮುದಾಯಕ್ಕೆ ಬೇಕಾದ ಶಿಕ್ಷಣವನ್ನು ಒದಗಿಸಿಕೊಡಲೇ ಬೇಕು.

ಲಿಂಕನ್ ಮಹಾಶಯನ ಹೊಸ ತತ್ವ

ಅಮೇರಿಕದ ಪ್ರಖ್ಯಾತ ಪ್ರೆಸಿಡೆಂಟನಾದ ಲಿಂಕನ್ ಮಹಾನುಭಾವನು ೧೮೫೯ರಲ್ಲಿ ವಿದ್ಯಾಭ್ಯಾಸದ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಸೂತ್ರರೂಪವಾಗಿ ಘನಭಾಷಣವೊಂದರಲ್ಲಿ ಪ್ರಪಂಚದ ಮುಂದಿಟ್ಟನು. ಆತನ ಸೂತ್ರಗಳು ಸೂಕ್ಷ್ಮವಾಗಿ, ಇವುಗಳು :—

''ವಿದ್ಯಾವಂತರು ಸಹ ಕಷ್ಟಪಟ್ಟು ದುಡಿಯಲೇ ಬೇಕು. ಹಾಗೆ ಮಾಡದಿದ್ದರೆ ಅವರು ಕಲಿತ ವಿದ್ಯೆಯೇ ಬಲವಾದ, ಸಹಿಸಲಸಾಧ್ಯವಾದ, ಕೇಡಾಗಿ ಪರಿಣಮಿಸುವುದು. ಯಾವ ದೇಶವೇ ಆಗಲಿ ಅದರ ನಿವಾಸಿಗಳಲ್ಲಿ ಬಹುಭಾಗವನ್ನು ಸೋವಾರಿತನದಲ್ಲಿಟ್ಟು ಪೋಷಿಸಲಾರದು. ಮುಕ್ಕಾಲು ಮೂರವೀಸ ಪಾಲು ಜನರು ಯಾವುದಾದರೊಂದು ಫಲಕರವಾದ ವೃತ್ತಿಯನ್ನನುಸರಿಸಿ ದುಡಿಯಲೇ ಬೇಕು. ಹಾಗಾದರೆ ವಿದ್ಯೆಯನ್ನೂ ಕೈಕೆಲಸವನ್ನೂ ಎಲ್ಲರಿಗೂ ತೃಪ್ತಿಕರವಾದ ರೀತಿಯಲ್ಲಿ ಹೊಂದಿಸುವ ಬಗೆ ಹೇಗೆ?

''ಕೈಕೆಲಸಕ್ಕೂ, ವಿದ್ಯೆಗೂ ಹೊಂದಿಕೆ ಎಂದೆಂದಿಗೂ ಆಗಲಾರದು. ಅಸಮಾನ ಸಮಾನವಾದದ್ದನ್ನು ಯಾವ ರೀತಿಯಲ್ಲೇ ಆಗಲಿ ಜೊತೆಗೂಡಿಸುವುದು ಅಸಂಗತ ಎಂಬುದೇ ಹಿಂದಿನವರ ತತ್ವವಾಗಿತ್ತು. ಆ ತತ್ವದ ಪ್ರಕಾರ ಕೆಲಸಗಾರನು ಕಪಿಲೆಗೆ ಕಟ್ಟಿದ ಎತ್ತಿನಂತೆ. ಆ ಎತ್ತಿಗೆ ಕಣ್ಣಿದ್ದರೇನು, ಇಲ್ಲದೆ ಕುರುಡಾಗಿದ್ದರೇನು? ಕಣ್ಣಿದ್ದ ಮಾತ್ರಕ್ಕೇ ಅದೇನು ಬಹಳ ಜಾಣತನದಿಂದ ಒದೆಯುವುದೇನು? ಆದುದರಿಂದ ಹೇಳಿದ ಕೆಲಸವನ್ನು ಮಾಡಬೇಕಾದ ಕೂಲಿಗಾರನಿಗೆ ವಿದ್ಯೆ ಅವಶ್ಯವಿಲ್ಲ. ಅವನಿಗೆ ವಿದ್ಯೆಯಿಂದ ಪ್ರಯೋಜನವಿಲ್ಲ. ಅಷ್ಟೇ ಅಲ್ಲ, ಅದರಿಂದ ಅವನಿಗೆ ಕೇಡುಂಟಾಗುವುದು; ಜನಸಮುದಾಯಕ್ಕೇ ಅಪಾಯ ಸಂಭವಿಸಬಹುದು. ಕೆಲಸಗಾರನಿಗೆ ತಲೆಯಿರುವುದು ಅವನ ದುರ್ಭಾಗ್ಯ. ಕಸಬುಗಾರನಿಗೆ ಬುದ್ಧಿಯಿರುವುದು ಸಿಡಿಮದ್ದಿನಂತೆ ಅಪಾಯಕರವಾದದ್ದು. ಆದುದರಿಂದ ಸಿಡಿಮದ್ದನ್ನು ತ್ಯಾವವಿದ್ದೆಡೆಯಲ್ಲಿಟ್ಟರೆ ಅದು ಯಾವ ರೀತಿಯಲ್ಲಿ ನಿರಪಾಯಕರವಾಗಿರುವುದೋ ಅಂಥ ಯಾವುದಾದರೊಂದು ರೀತಿಯಲ್ಲಿ ಈ ತಲೆಗಳನ್ನೆಲ್ಲಾ ವಿದ್ಯಾಗ್ನಿಯ ಬಿಸಿತಗಲದಂತೆ ಒಚ್ಚಿಡಬೇಕು, ಇದೇ ಹಿಂದಿನವರ ತತ್ವ. ಯಾವನಾದರೊಬ್ಬ ಚತುರನು ತಲೆಯೆಂಬುದೇ ಇಲ್ಲದೆ ಬಲವಾದ ಕೈಕಾಲುಗಳುಳ್ಳ ಕೆಲಸಗಾರನನ್ನೊಬ್ಬನನ್ನು ಸೃಷ್ಟಿಸಿದ್ದರೆ ಈ ತತ್ವಪ್ರಚಾರಕರು ಆತನಿಗೆ ಚಿರರುಣಿಗಳಾಗಿರುತ್ತಿದ್ದರೋ ಏನೋ!

''ಪ್ರತಿಯೊಬ್ಬ ವ್ಯಕ್ತಿಗೂ ತಿನ್ನುವುದಕ್ಕೆ ಬಾಯಿ ಒಂದು, ಕೈಗಳೆರಡು ಇರುವುದರಿಂದ ಬಹುಶಃ ಆ ಬಾಯಿಗೆ ಅನ್ನವನ್ನೊದಗಿಸುವುದಕ್ಕಾಗಿಯೇ ಈ ಎರಡು ಕೈಗಳು ಸೃಷ್ಟಿಯಾಗಿರಬೇಕು. ಎಡೆಬಿಡದೆ ಹೊಂದಿಕೊಂಡಿರುವ ಈ ಕೈಬಾಯಿಗಳಿಗೆ ಬುದ್ಧಿ ಹೇಳಿ, ಅವುಗಳಿಗೆ ದಾರಿಯನ್ನು ತೋರಿಸಿ, ಅವುಗಳನ್ನು ಸುರಕ್ಷಿತವಾಗಿಟ್ಟುಕೊಂಡಿರುವುದಕ್ಕಾಗಿಯೇ ತಲೆ(ಮೆದುಳು)ಯೊಂದು ಸೃಷ್ಟಿಯಾಗಿರಬೇಕು. ಹಾಗಿದ್ದರೆ ಆ ತಲೆಯನ್ನು ಕೃಷಿಮಾಡಿ ಯಾವುದಾದರೊಂದು ಪ್ರಯತ್ನದಿಂದ ಬುದ್ಧಿಯು ವಿಕಸಿತವಾಗುವಂತೆ ಮಾಡಿದರೆ, ತಲೆಯು ಅದಕ್ಕೆ ಹೊರಿಸಿರುವ ಕೆಲಸವನ್ನು ಹೆಚ್ಚು ಹೆಚ್ಚು ತೃಪ್ತಿಕರವಾಗಿ ಮಾಡುವುದೆನ್ನುವುದರಲ್ಲಿ ಸಂದೇಹವೇನು?''

ಲಿಂಕನ್ ಮಹಾನುಭಾವನು ಆಗಿನ ಕಾಲದಲ್ಲಿ ಹುಟ್ಟತಕ್ಕವನಲ್ಲ. ಅವನ ಘನತತ್ವವು ಆಗಿನ ವಿದ್ಯಾಭ್ಯಾಸ ತತ್ವಕ್ಕೆ ರೂಪುಗೊಡುತ್ತಿದ್ದ ಪಂಡಿತರಿಗೆ ಹಿಡಿಯಲಿಲ್ಲ. ಅವರು ಆತನನ್ನು ದೂಷಿಸಿದರು, ಅವನ ಮಾರ್ಗವು ಅಸಾಧುವೆಂದರು, ಆತನ ಹೊಸ ತತ್ವವು ಸಾಧಿಸತಕ್ಕದ್ದಲ್ಲವೆಂದರು. ಆದರೆ, ಲಿಂಕನ್ನನು ಬಿತ್ತಿದ ಬೀಜವು ನಿಧಾನವಾಗಿ ಮೊಳೆತು, ಪುಟ್ಟ ಹೊಸ ಸಸಿಯೊಂದು ಅದರಿಂದ ಬೆಳೆಯಲಾರಂಭಿಸಿ ಸಸಿಯು ಬೇರೂರಿತು.

ರೂಸ್‌ವೆಲ್ಟ್ ಮಹಾಶಯನ ಮತ

ಲಿಂಕನ್ನನ ರಾಜ್ಯಭಾರ ಮುಗಿದು ಅನೇಕ ವರ್ಷಗಳಾದಮೇಲೆ, ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ ಥಿಯೊಡೋರ್ ರೂಸ್‌ವೆಲ್ಟ್ ಪ್ರಭುವು ವಿದ್ಯಾಪ್ರಸಾರದ ವಿಷಯದಲ್ಲಿ ತನ್ನ ಮತವೇನೆಂಬುದನ್ನು ಆತನ ದೇಶಬಾಂಧವರ ಮುಂದಿಟ್ಟು ಈ ಮತವನ್ನು ನೀವುಗಳು ಕಂಠಪಾಠಮಾಡಿರೆಂದು ಕೇಳಿದನು. ಆ ಮಹಾನುಭಾವನಾಡಿದ ಘನವಾದ ಮಾತುಗಳಿವು:—

''ಹೆಂಗಸಿನ ಹೊಟ್ಟೆಯಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿಗೂ ಅದರ ಕೈಕಾಲುಗಳು ಮತ್ತು ಮೆದುಳು ಬೆಳೆಯುವುದಕ್ಕೆ ಬೇಕಾದ ಶಿಕ್ಷೆಯನ್ನು ಜನಾಂಗವೇ ಒದಗಿಸಿಕೊಡಬೇಕು. ಸರಿಯಾದ ರೀತಿಯಲ್ಲಿ ಪ್ರತಿ ವ್ಯಕ್ತಿಗೂ ವಿದ್ಯೆ ಕಲಿಸುವುದರಿಂದ ಪ್ರಸಂಚದ ಐಶ್ವರ್ಯವು ಹೆಚ್ಚುವುದು. ಧನಕನಕ ವಸ್ತು ವಾಹನಾದಿ ಐಶ್ವರ್ಯವೆಲ್ಲವೂ ಮಾನುಷೀಕೃತವಾದದ್ದು. ಪ್ರತಿ ವ್ಯಕ್ತಿಯೂ ಗಳಿಸಬಲ್ಲ ಐಶ್ವರ್ಯವು ಅವನವನ ವಿದ್ಯಾಬಲಕ್ಕನುಸಾರವಾಗಿರುವುದು. ನಾವು ಎಷ್ಟೆಷ್ಟು ಹೆಚ್ಚು ಜನರಿಗೆ ಸರಿಯಾದ ಶಿಕ್ಷಣವನ್ನು ಕೊಡುವೆವೋ ಅಷ್ಟಷ್ಟು ಹೆಚ್ಚು ಐಶ್ವರ್ಯವನ್ನು ಅವರು ಗಳಿಸುವರು; ಅಷ್ಟಷ್ಟು ದೇಶದ ಸಂಪತ್ತು ಹೆಚ್ಚುವುದು.'' ಸಂಯುಕ್ತ ಸಂಸ್ಥಾನಗಳ ವಿದ್ಯಾಭ್ಯಾಸದ ವಿಧಾನದ ಮೂಲ ತತ್ವಗಳಿವು.

ಜನಾಂಗದ ಈ ಹೊಸ ಆವಶ್ಯಕತೆಯನ್ನೊದಗಿಸಲಿಕ್ಕೆ ಅನೇಕ ದೇಶಗಳು ಅನೇಕ ಬಗೆಯಾಗಿ ಪ್ರಯತ್ನಪಡುತ್ತಿರುವುವು. ಅಮೇರಿಕದ ಗ್ರಾಮಾಂತರ ನಿವಾಸಿಗಳ ಆವಶ್ಯಕತೆಗಳಿಗನುಸಾರವಾಗಿ ಅಲ್ಲಿನ ವಿದ್ಯಾಭ್ಯಾಸ ಕ್ರಮವನ್ನು ಯಾವ

ರೀತಿಯಲ್ಲಿ ಹೊಂದಿಸಿಕೊಂಡರು, ಹೊಸ ಕ್ರಮವು ಕಾರ್ಯತಃ ಹೇಗೆ ರೂಪ ಗೊಂಡಿತು, ಈಗಿನ ಸ್ಥಿತಿಯೇನು ಎಂಬ ವಿಷಯಗಳನ್ನು ವಿಚಾರಿಸುವುದೇ ಈ ಲೇಖನದ ಉದ್ದೇಶ. ಅಮೇರಿಕದ ಸ್ಥಿತಿಗತಿಗಳಿಗೂ ಇಲ್ಲಿನ ಪರಿಸ್ಥಿತಿಗಳಿಗೂ ಎಷ್ಟೋ ವ್ಯತ್ಯಾಸವುಂಟೆಂಬುದು ನನಗೆ ಗೊತ್ತಿದೆ. ಅಲ್ಲಿನ ಏರ್ಪಾಡುಗಳೆಲ್ಲವೂ ಇಲ್ಲಿಗೆ ಸರಿಹೋಗಲಾರವು. ಆದರೆ ಹಿಂದೂಸ್ಥಾನವು ಮುಂದೆ ಎದುರಿಸಬೇಕಾಗಿ ಬರುವ ಅಡಚಣೆಗಳು ಎಂಥವುಗಳೆಂಬುದನ್ನು ಅಮೇರಿಕದ ಅನುಭವವು ನಮಗೆ ಸೂಚಿಸಬಹುದೆಂದು ನನ್ನ ನಂಬಿಕೆ. ನಮ್ಮ ಧ್ಯೇಯ, ನಮ್ಮ ಕ್ರಮಗಳನ್ನು ಗೊತ್ತುಮಾಡುವ ಮೊದಲು ಪ್ರಪಂಚದ ಎಲ್ಲಾ ಭಾಗಗಳಿಂದಲೂ ವಿಷಯಗಳನ್ನು ಸಂಗ್ರಹಿಸಬೇಕು. ವ್ಯವಸಾಯ ಕಸಬನ್ನು ಕಲಿಸುವ ಏರ್ಪಾಡು ಎಲ್ಲೆಲ್ಲಿಯೂ ಇನ್ನೂ ಬಾಲ್ಯಾವಸ್ಥೆಯಲ್ಲಿದೆಯೆನ್ನಬಹುದು. ವ್ಯವಸಾಯಗಾರನಿಗೆ ಅತ್ಯುತ್ತಮವಾದ ಶಿಕ್ಷಣಕ್ರಮವು ಇನ್ನೂ ಎಲ್ಲಿಯೂ ನಿಷ್ಕರ್ಷೆಯಾಗಿ ಗೊತ್ತಾಗಿಲ್ಲ. ಇದು ಹೊಸ ಚಳವಳಿ; ಆದರೆ ಬೇಗ ಬೆಳೆಯುತ್ತಿದೆ.

೧೯೦೦ನೇ ಇಸವಿಗೆ ಮೊದಲು ಅಮೇರಿಕದ ೧೪ ಪಾಠಶಾಲೆಗಳಲ್ಲಿ ವ್ಯವಸಾಯ ಪಾಠಗಳನ್ನು ಹೇಳುತ್ತಿದ್ದರು. ೧೯೧೧–೧೫ರಲ್ಲಿ ಇನ್ನು ೩೩ ಶಾಲೆಗಳಲ್ಲಿ ಉಪಕ್ರಮಿಸಿದ್ದರು. ೧೯೦೬–೧೯೧೦ ಈ ಐದು ವರ್ಷಗಳಲ್ಲಿ ಮತ್ತೆ ೪೧೩ ಶಾಲೆಗಳಲ್ಲಿ ವ್ಯವಸಾಯ ಪಾಠಗಳು ಉಪಕ್ರಮವಾದುವು. ಸಂಯುಕ್ತ ಸಂಸ್ಥಾನಗಳ ವಿದ್ಯಾಶಾಖೆಯ ವರದಿಯ ಪ್ರಕಾರ ೧೯೧೬ರಲ್ಲಿ ೨,೯೮೧ ಹೈಸ್ಕೂಲುಗಳಲ್ಲಿ ವ್ಯವಸಾಯ ಪಾಠವನ್ನು ಕಲಿಯುವ ವಿದ್ಯಾರ್ಥಿಗಳಿದ್ದರು. ಇವುಗಳಲ್ಲಿ ಸುಮಾರು ೭೫೦ ಹೈಸ್ಕೂಲುಗಳಲ್ಲಿ ಮಾತ್ರ ನಿಜವಾದ ಕಸಬುದಾರೀ ದೃಷ್ಟಿಯಿಂದ ಶಿಕ್ಷಣವು ಕೊಡಲ್ಪಡುತ್ತಿತ್ತು. ಈ ವಿಷಯಗಳು ವ್ಯವಸಾಯ ರಾಜ್ಯವಾದ ಸಂಯುಕ್ತ ಸಂಸ್ಥಾನಗಳಲ್ಲಿಯೂ ಸಹ ವ್ಯವಸಾಯ ಕಸಬಿನ ಶಿಕ್ಷಣವನ್ನು ಕೊಡುವ ಏರ್ಪಾಡು ಎಷ್ಟು ಈಚಿನದೆಂಬುದನ್ನು ಸೂಚಿಸುವುವು.

(ಸಶೇಷ)

4109–29. ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ

Appendix F G—1

SUBJECT.

Section VP

File No. 7/4 29

Serial No. 2

No. L 7212

Diary No. of letter replied to.....

General and Revenue Secretariat

( )

the *192*

To

The Revenue Commr

Date of issue 8/4/30

Signed by M.D.K-S

Sir,

I am directed to forward the marginally noted extract from the proceedings of the monthly meetings of the Director of Agriculture held at the Deccan on 29th Jan 30 and to request that the Deputy Commrs may be directed to encourage the Village Panchayets in their Districts to submit proposals for the Kanada edition

List of enclosures.....

Copied by.....

Examined by.....

over